ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜನವರಿ 2015
ಬೆಲೆ ರೂ. 1



## ಮಹಿಳಾ ಶಕ್ತಿಯ ಸಬಲೀಕರಣ

ರಾಷ್ಟ್ರೀಯ ವಿಚಾರ ಸಂಕಿರಣ

**ಕೇಂದ್ರೀಯ ಜಾನಪದ ಅಕಾಡೆಮಿಯ ಸ್ಥಾಪನೆಗೆ ಒತ್ತಾಯ**

**ಸರ್. ವಿಶ್ವೇಶ್ವರಯ್ಯ ಮೋತಿಭಾಗ್ ಮೆಟ್ರೋ ಸ್ಟೇಶನ್**

**ಸಂಘದ ಆರ್ಟ್ ಗ್ಯಾಲರಿಯಲ್ಲಿ ಕಲಾ ಪ್ರದರ್ಶನ**

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 25 ಸಂಚಿಕೆ 4
ಜನವರಿ 2015, ಬೆಲೆ ರೂ. 1



**ಅಭಿಮತ ಸಂಪಾದಕ ಮಂಡಳಿ**

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ
ಆಶಾಲತಾ ಎಂ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ:
9958697823

**ಉಪಾಧ್ಯಕ್ಷರು**
ಬಸವರಾಜು ಬಿ.ಕೆ.:
9810391608
ಆಶಾಲತಾ ಎಂ.:
9891249149

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ:
9811325440

**ಕೋಶಾಧಿಕಾರಿ**
ಡಾ. ಅವನೀಂದ್ರನಾಥ್ ರಾವ್
9868123382

**ಜಂಟಿ ಕಾರ್ಯದರ್ಶಿಗಳು**
ಎಸ್.ಸಿ. ಹೇಮಲತ:
9971121636
ಟಿ.ಎಂ. ಮೈಲಾರಪ್ಪ:
9868347461

**ಸಮಿತಿ ಸದಸ್ಯರು**
ಆಂಜನಿ ಗೌಡ:
9811165354
ರಾಧಾಕೃಷ್ಣ:
9818252183
ಪೂಜಾ ಪಿ. ರಾವ್:
9810882498
ವಿ.ವಿ.ಬಿರಾದಾರ:
9873005409
ಪಿ.ಸಿ.ಶ್ರೀನಿವಾಸ್:
9868170790
ಆನಂದ ಮುರಗೋಡ:
9312931233
ಆಶಾ ಶ್ಯಾಮಸುಂದರ್:
9871256177
ಬಸವರಾಜ ಮೇಟಿ:
9810282951
ಟಿ.ಪಿ. ಬೆಳ್ಳಿಯಪ್ಪ:
9654555795
ಕುಸುಮಾ ಪಿ. ನಂದರಗಿ
9868393955

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ


## ನೇರ ಮಾತು

ರಾಜಧಾನಿಯಲ್ಲಿ ಕರ್ನಾಟಕವನ್ನು ಗಟ್ಟಿಗೊಳಿಸುವ ಕುರಿತು ನಾವು ಕೈಗೊಂಡ ಅಭಿಯಾನದಲ್ಲಿ ಜೆಎನ್‌ಯುವಿನಲ್ಲಿ ಕನ್ನಡ ಅಧ್ಯಯನ ಪೀಠ ಹಾಗೂ ಮೋತಿಭಾಗ್ ಮೆಟ್ರೋ ನಿಲ್ದಾಣಕ್ಕೆ ಕರ್ನಾಟಕದ ಹೆಮ್ಮೆಯ ಕನ್ನಡಿಗ ಸರ್ ಎಂ. ವಿಶ್ವೇಶ್ವರಯ್ಯನವರ ಹೆಸರನ್ನಿಡುವಂತಹ ಎರಡು ಪ್ರಮುಖ ಹೆಜ್ಜೆಗಳನ್ನು ಕ್ರಮಿಸಿದ್ದೇವೆ. ಮುಂದಿನ ಹೆಜ್ಜೆಯಾಗಿ ದೆಹಲಿ ವಿಶ್ವವಿದ್ಯಾಲಯದಲ್ಲಿ ಸುಮಾರು 10 ವರ್ಷಗಳಿಂದ ನೇಮಕಾತಿ ಆಗದೆ ಉಳಿದಿರುವ ಎರಡು ಕನ್ನಡ ಉಪನ್ಯಾಸಕರ ಹುದ್ದೆಯನ್ನು ಶೀಘ್ರವೇ ನೇಮಕ ಮಾಡುವಂತೆ ಸಂಬಂಧ ಪಟ್ಟವರ ಮೇಲೆ ಒತ್ತಡ ಹೇರುವ ಕಾರ್ಯಾರಂಭವನ್ನು ದೆಹಲಿ ಕರ್ನಾಟಕ ಸಂಘ ಈಗಾಗಲೇ ಆರಂಭಿಸಿದೆ.

ದೆಹಲಿಯಲ್ಲಿ ಕನ್ನಡ ಭಾರತಿ ಒಂದು ಕಾಲದಲ್ಲಿ ದೆಹಲಿ ಕರ್ನಾಟಕ ಸಂಘಕ್ಕಿಂತಲೂ ಸಕ್ರಿಯವಾಗಿತ್ತು. ಖ್ಯಾತ ರಂಗಕರ್ಮಿಗಳಾದ ಬಿ.ವಿ. ಕಾರಂತ, ಎಂ.ಎಸ್. ಸತ್ಯು, ಎಂ.ವಿ. ನಾರಾಯಣ ರಾವ್, ಅರವಿಂದ ಕೌಜಲಗಿ, ಹೆಚ್. ಎಸ್. ಕುಲಕರ್ಣಿ, ಭೀಮರಾವ್ ಮುರಗೋಡ, ಜ್ಯೋತ್ಸ್ನಾ ರಾವ್ ಮೊದಲಾದವರು ತೊಡಗಿಸಿಕೊಂಡಿದ್ದ ಕನ್ನಡ ಭಾರತಿ ಅಂದು ರಂಗಭೂಮಿ ಕ್ಷೇತ್ರದಲ್ಲಿ ದೊಡ್ಡ ಹೆಸರನ್ನು ಪಡೆದಿತ್ತು.

ಕನ್ನಡ ಭಾರತಿಯಲ್ಲಿದ್ದವರಲ್ಲಿ ಇಂದು ಕೆಲವೇ ಮಂದಿ ನಮ್ಮೊಂದಿಗಿದ್ದಾರೆ. ಇಂದು ಸಕ್ರಿಯವಾಗಿಲ್ಲದಿರುವ ಕನ್ನಡ ಭಾರತಿಯನ್ನು ಮತ್ತೆ ಜೀವಂತಗೊಳಿಸುವುದು ಹೇಗೆ ಸಾಧ್ಯ ಎನ್ನುವುದನ್ನು ಇಂದು ದೆಹಲಿಯ ಕನ್ನಡ ರಂಗಭೂಮಿಯಲ್ಲಿ ತೊಡಗಿಸಿಕೊಂಡವರು ಚಿಂತನೆ ಮಾಡಬೇಕಾಗಿದೆ.

ಕನ್ನಡ ಭಾರತಿಯ ಕೊಡುಗೆಯನ್ನು ಸದಾ ಜೀವಂತವಾಗಿರಿಸಬೇಕು ಎನ್ನುವ ನಿಟ್ಟಿನಲ್ಲಿ ದೆಹಲಿ ಕರ್ನಾಟಕ ಸಂಘವು ಕನ್ನಡ ರಂಗಭೂಮಿಗೆ ರಂಗದ ಹಿಂದೆ ಮತ್ತು ರಂಗದ ಮುಂದೆ ವಿಶೇಷ ಕೊಡುಗೆ ನೀಡಿರುವ ಒಬ್ಬರನ್ನು ಕನ್ನಡ ಭಾರತಿ ಪ್ರಶಸ್ತಿಯ ಮೂಲಕ ಗೌರವಿಸಬಹುದು ಎಂಬ ಚಿಂತನೆಯು ನಡೆಯುತ್ತಿದೆ.

ದೆಹಲಿ ಕರ್ನಾಟಕ ಸಂಘದಲ್ಲಿ 2014ರಲ್ಲಿ ಸದಸ್ಯರ ವಿವಿಧ ಆಸಕ್ತಿಗಳಿಗೆ ಅನುಗುಣವಾಗಿ ಕೆಲವೊಂದು ಅತ್ಯುತ್ತಮ ಕಾರ್ಯಕ್ರಮಗಳನ್ನು ನೀಡಿರುವ ಸಂತೃಪ್ತಿಯಿದೆ. ನಾಡು ಮತ್ತು ನುಡಿಗೆ ಸಂಬಂಧಿಸಿದಂತೆ ಕೆಲವೊಂದು ಸಾಧನೆಯ ಮೈಲುಗಲ್ಲುಗಳನ್ನು ಸ್ಥಾಪಿಸಲು ಸಂಘದ ಸದಸ್ಯರೆಲ್ಲರ ಪ್ರೀತಿಯ ಬೆಂಬಲವಿತ್ತು. ಜತೆಗೆ ಕಾರ್ಯಕಾರಿ ಸಮಿತಿಯೂ ಬಹಳಷ್ಟು ಶ್ರಮವಹಿಸಿದೆ. ಸಂಘದ ಸದಸ್ಯರಿಂದ, ಹಿತಚಿಂತಕರಿಂದ ಮತ್ತು ಮುಖ್ಯವಾಗಿ ಮಾಧ್ಯಮಗಳಿಂದ ಆಗಾಗ ನಮ್ಮನ್ನು ಎಚ್ಚರಿಸುವ ಕೆಲಸಗಳೂ ನಡೆದಿವೆ. ಎಲ್ಲರ ಸಲಹೆ, ಅಭಿಪ್ರಾಯ ಮತ್ತು ಬೆಂಬಲದಿಂದ ಮಾತ್ರವೇ ದೆಹಲಿಯಲ್ಲಿ ಕರ್ನಾಟಕದ ಕಂಪನ್ನು ಹರಡುವ ಕೆಲಸವನ್ನು ನಡೆಸಬಹುದು. ಈ ಹೊಸ ವರ್ಷದಲ್ಲಿ ಇನ್ನಷ್ಟು ಹುಮ್ಮಸ್ಸಿನಿಂದ, ಉತ್ಸಾಹದಿಂದ ಮತ್ತು ಎಲ್ಲರ ಆಶೋತ್ತರಗಳಿಗೆ ಸ್ಪಂದಿಸುವಂತಹ ಹತ್ತು ಹಲವು ಕಾರ್ಯಕ್ರಮಗಳನ್ನು ಮತ್ತು ಚಟುವಟಿಕೆಗಳನ್ನು ನಡೆಸಲು ನೀವೆಲ್ಲರೂ ನಮ್ಮೊಂದಿಗೆ ಇದ್ದೀರಿ ಎಂದು ಭಾವಿಸಿದ್ದೇವೆ.

ದೆಹಲಿ ಮಾತ್ರವಲ್ಲದೇ ಕರ್ನಾಟಕದಲ್ಲಿ ಮತ್ತು ನಾಡಿನ ಹೊರಗೆ ಇರುವ ಸಂಘದ ಸದಸ್ಯರು ಮತ್ತು ಸಂಘದ ಎಲ್ಲಾ ಹಿತೈಷಿಗಳಿಗೆ ಹೊಸ ವರ್ಷದ ಹಾರ್ದಿಕ ಶುಭಾಶಯಗಳು. ಅ

*ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು*

## ಮುನ್ನೋಟ

ಕರ್ನಾಟಕದ ಭಾಷೆ, ಸಂಸ್ಕೃತಿ, ಕಲೆ ಮತ್ತು ಸಾಹಿತ್ಯವನ್ನು ಕಾಪಾಡಿಕೊಂಡು ಪ್ರೋತ್ಸಾಹಿಸುವ ಸಲುವಾಗಿ ದೆಹಲಿ ಕರ್ನಾಟಕ ಸಂಘದಲ್ಲಿ ಬಹಳಷ್ಟು ಕಾರ್ಯಕ್ರಮಗಳು ನಡೆಯುತ್ತಿವೆ. ಜೆ.ಎನ್.ಯುವಿನಲ್ಲಿ ಕನ್ನಡ ಅಧ್ಯಯನ ಪೀಠ ಮತ್ತು ದೆಹಲಿ ಕರ್ನಾಟಕ ಸಂಘಕ್ಕೆ ಹೊಂದಿಕೊಂಡಿರುವ ಮೆಟ್ರೋ ಸ್ಟೇಶನ್‌ಗೆ ಸರ್ ವಿಶ್ವೇಶ್ವರಯ್ಯ ಎಂಬ ಹೆಸರು ಇಡಲಾಗುವ ಪ್ರಸ್ತಾವಗಳ ಅಂಗೀಕಾರ ಇತ್ತೀಚೆಗಿನ ಕೊಡುಗೆಗಳು. ಜತೆಗೆ ಇದೀಗ ನಾಡಿನಾದ್ಯಂತ ಪ್ರತಿಷ್ಠಿತವೆಂದೆನಿಸಿರುವ ದೆಹಲಿ ಕರ್ನಾಟಕ ಸಂಘವು ನೀಡುತ್ತಿರುವ ಡಾ. ಕೆ. ಶಿವರಾಮ ಕಾರಂತ ಪ್ರಶಸ್ತಿಯ ಮಟ್ಟದಲ್ಲಿಯೇ ದೆಹಲಿಯ ಕನ್ನಡ ರಂಗಭೂಮಿಯಲ್ಲಿ ದುಡಿದವರಿಗೆ ಮತ್ತು ಅಪೂರ್ವವಾದ ಕೊಡುಗೆಯನ್ನು ನೀಡಿದವರನ್ನು ವರ್ಷಕ್ಕೆ ಒಮ್ಮೆ ಪ್ರಶಸ್ತಿಯನ್ನು ನೀಡಿ ಗೌರವಿಸುವ ಯೋಜನೆಯೂ ಇದೆ.

**ದೆಹಲಿಯಲ್ಲಿ ನಡೆಯುತ್ತಿರುವ ಕನ್ನಡದ ಕೆಲಸಗಳನ್ನು ಬೆಂಗಳೂರಿನಲ್ಲಿರುವ ಕರ್ನಾಟಕ ಸರಕಾರ ಕೂಲಂಕುಶವಾಗಿ ನೋಡುತ್ತಿದೆ. ಇಲ್ಲಿನ ಕೆಲಸಗಳನ್ನು ಮೆಚ್ಚಿ ಸಂಘಕ್ಕೆ ಮತ್ತೆ 20 ಲಕ್ಷ ರೂಪಾಯಿಗಳನ್ನು ಸರಕಾರವು ಬಿಡುಗಡೆ ಮಾಡಿದೆ. ಕಳೆದೆರಡು ವರ್ಷಗಳಲ್ಲಿ 40 ಲಕ್ಷ ರೂಪಾಯಿಗಳನ್ನು ಸರಕಾರ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬಿಡುಗಡೆ ಮಾಡಿದೆ. ಕರ್ನಾಟಕ ಸರಕಾರಕ್ಕೆ ಕೃತಜ್ಞತೆಗಳು. ಹೀಗೆ ಸಾರ್ವಜನಿಕವಾಗಿ ಪಡೆದುಕೊಂಡ ಹಣದ ವ್ಯವಹಾರವನ್ನು ಪಾರದರ್ಶಿಕವಾಗಿ ಸಂಘದ ಕಾರ್ಯಕಾರಿ ಸಮಿತಿಯು ನಡೆಸುತ್ತಿದೆ. ಸಂಘದ ಎಲ್ಲಾ ಕೆಲಸ ಮತ್ತು ಕಾರ್ಯಕ್ರಮಗಳು ಸದಸ್ಯರ ಮುಂದೆ ಇವೆ. ಸಂಘದ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಎಲ್ಲ ಲೆಕ್ಕಪತ್ರಗಳನ್ನು ನೀಡಲಾಗುತ್ತಿದೆ. ಇನ್ನೂ ಹೆಚ್ಚಿನ ಪಾರದರ್ಶಕತೆಗಾಗಿ ಆಂತರಿಕ ಲೆಕ್ಕಪತ್ರ ಪರಿಶೋಧಕರು ಮತ್ತು ಪ್ರತ್ಯೇಕವಾದ ಕಾವಲು ಸಮಿತಿ ಕೂಡಾ ಇದೆ. ಹೀಗಾಗಿ ಸಂಘಕ್ಕೆ ಬರುವ ಪ್ರತಿಯೊಂದು ರೂಪಾಯಿಯನ್ನು ಬಹಳಷ್ಟು ಎಚ್ಚರಿಕೆಯಿಂದ ಮತ್ತು ಜವಾಬ್ದಾರಿಯಿಂದ ಖರ್ಚು ಮಾಡಲಾಗುತ್ತಿದೆ.**

ಹೊಸ ವರ್ಷದ ಆರಂಭದ ತಿಂಗಳಲ್ಲಿ ಹೊರನಾಡ ಕನ್ನಡ ಸಂಘ ಸಂಸ್ಥೆಗಳ ಪ್ರತಿನಿಧಿಗಳ ಮಹಾಮೇಳವನ್ನು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಜತೆ ಸೇರಿ ಜನವರಿ 24 ಮತ್ತು 25ರಂದು ನಡೆಸಲಾಗುವುದು. ಹೊರನಾಡಿನಲ್ಲಿರುವ ನಾವೆಲ್ಲರೂ ಜತೆಯಾಗಿ ಸಂಭ್ರಮದಿಂದ ಈ ಮಹಾಮೇಳದಲ್ಲಿ ಭಾಗಿಯಾಗೋಣ. ಅಂತೆಯೇ ಜನವರಿ 17 ಮತ್ತು 18ರಂದು ಕರ್ನಾಟಕ ಉತ್ಸವವನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ನಡೆಸಲಾಗುವುದು. ನೀವೆಲ್ಲರೂ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿರಿ ಎಂದು ಕೇಳಿಕೊಳ್ಳುವೆ. ಅ

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*

**17 ಮತ್ತು 18 ಜನವರಿ 2015 ಶನಿವಾರ ಮತ್ತು ಭಾನುವಾರ**

## ಕರ್ನಾಟಕದ ಸಾಧಕಿಯರ ಉತ್ಸವ

ದೆಹಲಿ ಕರ್ನಾಟಕ ಸಂಘದ ಸಭಾಂಗಣ

*ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, ಹಾಗೂ ದೆಹಲಿ ಕರ್ನಾಟಕ ಸಂಘದಿಂದ*

**ಶನಿವಾರ, 17ನೇ ಜನವರಿ ಮಧ್ಯಾಹ್ನ 2ರಿಂದ**

| | |
|---|---|
| **ಚೌಡಿಕೆ** | : ರಾಧಾಭಾಯಿ, ಅಥಣಿ |
| **ನಿಮಗಾಗಿ, ನಮ್ಮ ನಾಡಿಗಾಗಿ** | : ಗುರು ಭಾನುಮತಿ ಅವರ ನೃತ್ಯ ನಿರ್ದೇಶನ ತಂಡದಿಂದ ಸಮೂಹ ನೃತ್ಯ |
| **ಸಂಗೀತ್ ಹಮಾರ, ಸರಿತಾ ಆಪ್‌ಕೆ** | : ಸಂಗೀತ ಕಟ್ಟಿ ಕುಲಕರ್ಣಿ |
| **ಓ ಎನ್ನ ದೇಶಬಾಂಧವರೇ** | : ಅನುರಾಧಾ ಧಾರೇಶ್ವರ, ಧಾರವಾಡ |

**ಭಾನುವಾರ, 18ನೇ ಜನವರಿ ಮಧ್ಯಾಹ್ನ 2ರಿಂದ**

| | |
|---|---|
| **ಉಳ್ಳವರು ಶಿವಾಲಯ ಮಾಡುವರು** | : ಕಸ್ತೂರಿ ಶಂಕರ್ |
| **ಶಂಭೋ ಶಿವ ಶಂಭೋ** | : ಪ್ರತಿಭಾ ಪ್ರಹ್ಲಾದ್ |
| **ಮಧುರ ಮಧುರವೀ ಮಂಜುಳ ಗಾನ** | : ಬಿ.ಕೆ.ಸುಮಿತ್ರ |
| **ಸಾವಿರದ ಶರಣವ್ವ ಕರಿಮಾಯಿ ತಾಯೇ** | : ನಾಡೋಜ ಬಿ.ಜಯಶ್ರೀ |

**24 ಮತ್ತು 25 ಜನವರಿ 2015 ಶನಿವಾರ ಮತ್ತು ಭಾನುವಾರ**

*ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ಮತ್ತು ದೆಹಲಿ ಕರ್ನಾಟಕ ಸಂಘ ಆಯೋಜಿಸುವ*

ದೆಹಲಿ ಕರ್ನಾಟಕ ಸಂಘದ ಸಭಾಂಗಣ

ಮುಂಜಾನೆ 10–30 ಗಂಟೆಯಿಂದ

## ಅಖಿಲ ಭಾರತ ಹೊರನಾಡ ಕನ್ನಡ ಸಂಘಗಳ ಪ್ರತಿನಿಧಿಗಳ 5ನೇ ಮಹಾಮೇಳ

**ನಾಡೋಜ ಡಾ. ಪಾಟೀಲ ಪುಟ್ಟಪ್ಪ**
(ಅಧ್ಯಕ್ಷರು, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ) ಅವರ ಅಧ್ಯಕ್ಷತೆಯಲ್ಲಿ ಉದ್ಘಾಟನಾ ಸಮಾರಂಭ ಮತ್ತು ಎರಡು ದಿನಗಳ ಚಿಂತನಾ ಗೋಷ್ಠಿಗಳು

- ರಂಗೋಲಿ ಪ್ರದರ್ಶನ
- ದೆಹಲಿಯ ಕನ್ನಡ ಮಕ್ಕಳಿಗಾಗಿ ಕರ್ನಾಟಕದ ಕುರಿತು ಕ್ವಿಜ್ ಸ್ಪರ್ಧೆ
- ದೆಹಲಿಯ ವಿವಿಧ ಕನ್ನಡ ಸಂಘ ಸಂಸ್ಥೆಗಳಿಂದ ನೃತ್ಯೋತ್ಸವ
- ಶಿಲ್ಪಾ ಎಂ. ನವಲಿಮಠ, ಧಾರವಾಡ ಇವರಿಂದ ಸುಗಮ ಸಂಗೀತ
- ಚಂದ್ರಶೇಖರ ಕಾಳೆ ಸಂಗಡಿಗರಿಂದ ಜಾನಪದ ನೃತ್ಯ ಹಾಗೂ ಹಾಡುಗಾರಿಕೆ
- ಸಿದ್ದು ಮೋಟೆ ತಂಡದಿಂದ ಡೊಳ್ಳಿನ ಪದಗಳ ಹಾಡುಗಾರಿಕೆ

(ಈ ಸಂದರ್ಭದಲ್ಲಿ ದೆಹಲಿ ಕನ್ನಡಿಗರಿಂದ ರಂಗೋಲಿಯನ್ನು ಮತ್ತು 10ರಿಂದ 15 ವರ್ಷದ ದೆಹಲಿಯ ಕನ್ನಡ ಮಕ್ಕಳಿಗಾಗಿ ಕರ್ನಾಟಕದ ಕುರಿತು ಕ್ವಿಜ್ ಸ್ಪರ್ಧೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಆಸಕ್ತರು ಜನವರಿ 20, 2015ರೊಳಗಾಗಿ ಸಂಘದ ಕಾರ್ಯಾಲಯದಲ್ಲಿ ತಮ್ಮ ಹೆಸರನ್ನು ನೊಂದಾಯಿಸತಕ್ಕದ್ದು)

‘ಅಭಿಮತ’ ಬೆಳ್ಳಿ ಸಂಪುಟದ ಸಂದರ್ಭದಲ್ಲಿ ಮುಂಬರುವ ತಿಂಗಳುಗಳಲ್ಲಿ ಒಂದು ವಿಶೇಷಾಂಕವನ್ನು ಪ್ರಕಟಿಸುವ ಯೋಜನೆಯಲ್ಲಿದೆ.

ಅಭಿಮತದ ಪ್ರೀತಿಯ ಓದುಗರು, ಬರಹಗಾರರು ಸಂಪಾದಕರ ಮಂಡಳಿಯಲ್ಲಿ ಕೆಲಸ ಮಾಡಿದವರು ಅಲ್ಲದೇ ಸಂಘದ ಸದಸ್ಯರು, ಈ ವಿಶೇಷ ಸಂಚಿಕೆಗೆ ತಮ್ಮ ಅನುಭವದ, ಅಪರೂಪದ ಬರಹಗಳನ್ನು ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇವೆ. ಬರಹಗಳನ್ನು ಅಂಚೆ ಅಥವಾ ಈಮೇಲ್(dksangha@gmail.com) ಮೂಲಕ ಸಂಘದ ಕಛೇರಿಗೆ ಜನವರಿ 25ರ ಒಳಗಾಗಿ ಕಳುಹಿಸಬಹುದು.

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 18 ಜನವರಿ 2015ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 18 ಜನವರಿ 2015ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 25, ಜನವರಿ 2015 ರಂದು ಬೆಳಿಗ್ಗೆ 11 ಗಂಟೆಯಿಂದ.


**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 25 ಜನವರಿ 2015 ರಂದು ಸಾಯಂಕಾಲ 4 ಗಂಟೆಯಿಂದ.

**ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.**
**ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011–26109615, 26104818**

# ಬಾದಾಮಿ ಮತ್ತು ಧಾರವಾಡದ ಕಲಾವಿದರಿಂದ ಕಲಾ ಪ್ರದರ್ಶನ

ಬಾದಾಮಿಯ ಕರ್ನಾಟಕ ಲಲಿತಾ ಕಲಾ ವಿಶ್ವವಿದ್ಯಾಲಯ ಮತ್ತು ಧಾರವಾಡದ ನ್ಯಾಶನಲ್ ಅಕಾಡೆಮಿ ಆಫ್ ವಿಶುವಲ್ ಆರ್ಟ್ ಸಂಸ್ಥೆಗಳು ದೆಹಲಿ ಕರ್ನಾಟಕ ಸಂಘದ ಸಹಕಾರದೊಂದಿಗೆ ಸಂಘದ ಆರ್ಟ್ ಗ್ಯಾಲರಿಯಲ್ಲಿ ಕಲಾ ಪ್ರದರ್ಶನ ನೀಡಿತು.

ದಿನಾಂಕ 30.12.2014ರಂದು ಸಂಜೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಹನ್ನೆರಡು ಜನ ಕಲಾವಿದರ ಕಲಾಪ್ರದರ್ಶನವನ್ನು ಉದ್ಘಾಟಿಸಿದರು.









ಕರ್ನಾಟಕ ಲಲಿತ ಕಲಾ ವಿಶ್ವವಿದ್ಯಾಲಯದ ವಿಶೇಷ ಅಧಿಕಾರಿ ಪ್ರೊ.ಎ.ಸಿ.ಪಾಟೀಲ ಅವರು ದಶಕದ ಹಿಂದೆ ಸಂಘದ ನೂತನ ಕಟ್ಟಡ ಉದ್ಘಾಟನೆ ವೇಳೆ ತಮ್ಮ ಕಲಾ ಪ್ರದರ್ಶನ ಇಲ್ಲಿ ಪ್ರದರ್ಶನಗೊಂಡಿದ್ದನ್ನು ಸ್ಮರಿಸಿದರು. ಬಾಗಲಕೋಟೆಯ ವಿಜಯ ಚಿತ್ರಕಲಾ ಮಹಾವಿದ್ಯಾಲಯದ ಪ್ರಾಂಶುಪಾಲ, ಹಿರಿಯ ಕಲಾವಿದ ಡಾ.ಬಸವರಾಜ ಗವಿಮಠ, ವಿಜಯ ಗವಿಮಠ, ಸಿದ್ದರಾಮಯ್ಯ ಹಿರೇಮಠ, ಪ್ರತಿಭಾ ಪಾಟೀಲ್, ಯುವರಾಜ ಆರ್.ಎಸ್, ಸಿದ್ದಮ್ಮ ವಿ.ಕಡಪಟ್ಟಿ, ಬಸಮ್ಮ ಎಂ.ಪಾಟೀಲ್, ವೈಶಾಲಿ ಹಾಗೂ ಚಿತ್ರಾ ಎಸ್.ಪಾಟೀಲ್‌ಅವರ ಕಲಾ ಪ್ರದರ್ಶನ ನೆರೆದವರ ಮೆಚ್ಚುಗೆ ಗಳಿಸಿತ್ತು.

**ಪ್ರದರ್ಶನಗೊಳಿಸಿದ ಎಲ್ಲಾ 20 ಕಲಾಕೃತಿಗಳನ್ನು ದೆಹಲಿ ಕರ್ನಾಟಕ ಸಂಘಕ್ಕೆ ದೇಣಿಗೆಯಾಗಿ ನೀಡಿದ್ದಾರೆ.**

ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ.ನಾಗರಾಜ, ಕೋಶಾಧಿಕಾರಿ ಡಾ.ಅವನೀಂದ್ರನಾಥ್ ರಾವ್, ಜಂಟೀ ಕಾರ್ಯದರ್ಶಿ ಎಚ್.ಸಿ.ಹೇಮಲತ, ಸದಸ್ಯರುಗಳಾದ ವಿ.ವಿ.ಬಿರದಾರ, ಪಿ.ಸಿ.ಶ್ರೀನಿವಾಸ, ಟಿ.ಪಿ.ಬೆಳ್ಳಿಯಪ್ಪ, ಆಶಾ ಶ್ಯಾಮ್‌ಸುಂದರ್ ಹಾಗೂ ಕಲಾವಿದ ಚೆನ್ನು ಸಿ.ಮಠದ ಅವರು ಉಪಸ್ಥಿತರಿದ್ದರು. ಅ

*ಡಾ.ಅವನೀಂದ್ರನಾಥ್ ರಾವ್*



# ಬೀದರ್‌ನ ಕಲಾವಿದರಿಂದ ಕಲಾ ಪ್ರದರ್ಶನ



"ನಾವು ಕನ್ನಡನಾಡಿನಿಂದ ದೆಹಲಿಗೆ ಬಂದು ನೆಲೆಸಿ ಸಾಕಷ್ಟು ಕೆಲಸ ಮಾಡಿ ಕಲಾ ಜಗತ್ತಿಗೆ ಉತ್ತಮ ಕೃತಿ ನಿರ್ಮಿಸಿ ಪ್ರದರ್ಶಿಸಲು ಆರ್ಟ್ ಗ್ಯಾಲರಿಗಾಗಿ ವರ್ಷಗಟ್ಟಲೆ ಕಾಯಬೇಕಾಗಿತ್ತು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ", ಎಂದು ದೆಹಲಿಯ ಹೆಸರಾಂತ ಕಲಾವಿದ ಕೆ.ಆರ್. ಸುಬ್ಬಣ್ಣ ಅವರು ಹೇಳಿದರು. ಅವರು ಸಂಘದ ಆರ್ಟ್ ಗ್ಯಾಲರಿಯಲ್ಲಿ ಬೀದರ್‌ನ ಯುವ ಕಲಾವಿದರ ಗುಂಪು ಪ್ರದರ್ಶನವೊಂದನ್ನು ಉದ್ಘಾಟಿಸಿ ಮಾತಾಡುತ್ತಿದ್ದರು.

ದೆಹಲಿಯಲ್ಲಿ ನೆಲೆಸಿದ ಹಿರಿಯ ಕಲಾವಿದರು ಹಾಗೂ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳ ಪರಿಶ್ರಮದ ಫಲಸ್ವರೂಪವಾಗಿ ಇಂದು ಸಂಘದ ಆವರಣದಲ್ಲಿ ಸುಸಜ್ಜಿತ ಆರ್ಟ್ ಗ್ಯಾಲರಿ ನಿರ್ಮಾಣವಾಗಿದೆ. ದೆಹಲಿ ಕರ್ನಾಟಕ ಸಂಘದ ಈ ಕಾರ್ಯ ಅತ್ಯಂತ ಶ್ಲಾಘನೀಯ. ಇದು ಕರ್ನಾಟಕದ ಯುವ ಕಲಾವಿದರಿಗೆ ಕಲಾಜಗತ್ತಿಗೆ ತಮ್ಮನ್ನು ಪರಿಚಯಿಸಿಕೊಳ್ಳಲು ಸಹಕಾರಿಯಾಗಿದೆ ಎಂದು ಸುಬ್ಬಣ್ಣ ಅವರು ನುಡಿದರು. ಈಗ ನಾನು ಉದ್ಘಾಟಿಸುತ್ತಿರುವ ಈ ಮೂರು ಯುವ ಕಲಾವಿದರ ಪ್ರದರ್ಶನವು ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಕಲಾವಿದರನ್ನು ರಾಜಧಾನಿಗೆ ಆಕರ್ಷಿಸಿ ದೇಶವಿದೇಶಗಳಲ್ಲಿಯೂ ಪ್ರಸಿದ್ಧಿ ಪಡೆಯುವಂತಾಗಲಿ ಎಂದು ಸುಬ್ಬಣ್ಣ ಅವರು ಹಾರೈಸಿದರು.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅನುದಾನದೊಂದಿಗೆ ಯೋಗೀಶ್ ಕಲಾ ಶಾಲೆ ಬೀದರಿನಿಂದ ದೆಹಲಿಗೆ ಬಂದಿರುವ ಆಕಾಶ್ ಎಸ್ ಅಲ್ಲಿ, ರಾಜಕುಮಾರ್ ಆರ್ ದೀನೆ ಮತ್ತು ಯೋಗೀಶ್ ಸಿ ಮಠದ ಅವರ ಕಲಾಕೃತಿಗಳನ್ನು ಸಂಘದ ಆರ್ಟ್ ಗ್ಯಾಲರಿಯಲ್ಲಿ ಡಿಸೆಂಬರ್ 25ರಿಂದ 28ರ ವರೆಗೆ ಪ್ರದರ್ಶಿಸಲಾಯಿತು.

ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ದೆಹಲಿಯ ಹೆಸರಾಂತ ಕಲಾವಿದರುಗಳಾದ ಭೀಮರಾವ್ ಮುರಗೋಡ , ಸುಧೀರ್ ಫಡ್ನೀಸ್, ಚೆನ್ನು ಎಸ್ ಮಠದ ಮತ್ತು ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಆನಂದ ಮುರಗೋಡ ಅವರು ಇನ್ನಿತರ ಗಣ್ಯರೊಂದಿಗೆ ಉಪಸ್ಥಿತರಿದ್ದರು. ಅ

***ಜಮುನಾ ಚ ಮಠದ***











# ಯೋಗೀಶ್ ಮಠದ ಅವರ ಚಿತ್ರಕಲಾ ಪ್ರದರ್ಶನ


ಚಿತ್ರಕಲಾ ಶಾಲೆಗಳು ಗ್ರಾಮೀಣ ಪ್ರದೇಶದಿಂದ ಬರುವ ಕಲಾವಿದರ ಕಲಾಶಕ್ತಿಯನ್ನು ಗುರುತಿಸಿ ಅವರಲ್ಲಿನ ಸ್ವಂತಿಕೆಯ ಬೆಳವಣಿಗೆಗೆ ಸದಾ ಶ್ರಮಿಸಬೇಕು ಎಂದು ಖ್ಯಾತ ಚಿತ್ರಕಲಾವಿದ ಜಿ.ಆರ್. ಈರಣ್ಣ ಅವರು ಹೇಳಿದರು. ಅವರು ಯುವ ಚಿತ್ರಕಲಾವಿದ ಯೋಗೀಶ್ ಚ ಮಠದ ಅವರ ಏಕ ವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಇದೇ ಡಿಸೆಂಬರ್ 22ರಂದು ಉದ್ಘಾಟಿಸುತ್ತ ಈ ಮಾತನ್ನು ಹೇಳಿದರು.

ಕಲಾ ಶಾಲೆಗಳು ಕಲೆಯ ಮೂಲ ತತ್ವಗಳನ್ನು ಭೋದನೆ ಮಾಡಿ ಕಲೆಯ ಹೊಸ ಆಯಾಮಗಳನ್ನು ಕಂಡುಕೊಳ್ಳುವಲ್ಲಿ ವಿದ್ಯಾರ್ಥಿಗಳಿಗೆ ಪ್ರಚೋದನಾಕಾರಿ ವಾತಾವರಣ ಕಲ್ಪಿಸಿಕೊಡಬೇಕು. ಯುವ ಕಲಾವಿದರು ಸ್ವಂತಿಕೆಯ ಶೈಲಿಯನ್ನು ಗುರುತಿಸಿಕೊಂಡು ಪ್ರಾವೀಣ್ಯತೆ ಪಡೆಯಲು ಶ್ರಮಿಸಬೇಕು. ತಮಗೆ ಯಾವ ಕೃತಿಯ ನಿರ್ಮಾಣದಲ್ಲಿ ತೃಪ್ತಿ ಸಿಗುತ್ತದೆಯೋ ಅದನ್ನು ಮುಂದುವರೆಸಬೇಕು. ಅಂತಹ ಪರಿಶ್ರಮಿ ಕಲಾವಿದನನ್ನು ಯಶಸ್ಸು ಮತ್ತು ಧನ ಕ್ರಮೇಣ ಹಿಂಬಾಲಿಸುತ್ತದೆ, ಎಂದು ಈರಣ್ಣ ಅವರು ಹೇಳಿದರು.

ಯೋಗೀಶ್ ಚ ಮಠದ ಅವರು ಬೀದರಿನ ಯೋಗೀಶ್ ಚಿತ್ರಕಲಾ ಶಾಲೆಯ ಬೋಧಕರಾಗಿದ್ದು ಈ ಶಾಲೆಯ ಸಂಸ್ಥಾಪಕ ಪ್ರಾಂಶುಪಾಲ ದಿ. ಚನ್ನವೀರಸ್ವಾಮಿ ಚ ಮಠದ ಅವರ ಪುತ್ರರು. ಬೆಂಗಳೂರಿನ ಕರ್ನಾಟಕ ಲಲಿತ ಕಲಾ ಅಕಾಡೆಮಿಯಾ ಆಶ್ರಯದಲ್ಲಿ ಮಠದ ಅವರ ಚಿತ್ರಕಲಾ ಪ್ರದರ್ಶನವು ಡಿಸೆಂಬರ್ 22ರಿಂದ 24ರ ವರೆಗೆ ನಡೆಯಿತು.

ಉದ್ಘಾಟನಾ ಸಮಾರಂಭದಲ್ಲಿ ದೆಹಲಿ ಕರ್ನಾಟಕ ಸಂಘದ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ್, ಕೋಶಾಧಿಕಾರಿ ಡಾ. ವೈ. ಅವನೀಂದ್ರನಾಥ್ ರಾವ್, ಬೀದರಿನ ಯೋಗೀಶ್ ಚಿತ್ರಕಲಾ ಶಾಲೆಯ ಅಧ್ಯಕ್ಷ ಶ್ರೀ ಚೆನ್ನು ಎಸ್. ಮಠದ ಹಾಗೂ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಶ್ರೀ ಶಿವಾನಂದ ಸಿರ್ಸಿಕರ್ ಮೊದಲಾದ ಕಲಾಸಕ್ತರು ಉಪಸ್ಥಿತರಿದ್ದರು. ಅ

***ಜಮುನಾ ಚ ಮಠದ***



## ಎಚ್.ಎಸ್. ಕುಲಕರ್ಣಿಯವರ ನಾಟಕ ಕೃತಿಗಳ ಬಿಡುಗಡೆ

ದೆಹಲಿ ಕರ್ನಾಟಕ ಸಂಘವು ಪ್ರಕಟಿಸಿದ ದೆಹಲಿಯ ಹಿರಿಯ ರಂಗ ಕಲಾವಿದ, ನಾಟಕಕಾರ ಎಚ್.ಎಸ್. ಕುಲಕರ್ಣಿ ಅವರ ದೇವರು ಎದ್ದು ಬಂದಾಗ ಮತ್ತು ಕಿತ್ತೂರಿನ ಕೆಚ್ಚೆದೆಯ ರಾಣಿ ಚೆನ್ನಮ್ಮ ಎಂಬ ಎರಡು ನಾಟಕ ಕೃತಿಗಳನ್ನು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಇಂಟರ್‌ನ್ಯಾಶನಲ್ ಸ್ಟಡೀಸ್‌ನ ಪ್ರೊಫೆಸರ್ ಎಚ್.ಎಸ್. ಪ್ರಭಾಕರ ಅವರು ಸಂಘದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಡಿಸೆಂಬರ್ 21ರಂದು ಬಿಡುಗಡೆ ಮಾಡಿದರು. ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

ಇಳಿವಯಸ್ಸಿನಲ್ಲಿಯೂ ಎಚ್.ಎಸ್. ಕುಲಕರ್ಣಿಯವರಿಗೆ ನಾಟಕದ ಮೇಲೆ ಅತೀವ ಅಭಿಮಾನವಿರುವುದನ್ನು ಶ್ಲಾಘಿಸಿದ ಪ್ರೊ. ಪ್ರಭಾಕರ ಅವರು ಕುಲಕರ್ಣಿಯವರು ಇನ್ನೂ ಹೆಚ್ಚಿನ ನಾಟಕಗಳನ್ನು ಬರೆಯುವ ಸ್ಫೂರ್ತಿ ಹಾಗೂ ಶಕ್ತಿಯನ್ನು ಪಡೆಯಲಿ ಎಂದು ಆಶಿಸಿದರು. ಕಾರ್ಯಕ್ರಮವನ್ನು ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಪಿ.ಸಿ.ಶ್ರೀನಿವಾಸ್ ನಿರೂಪಿಸಿದರು. ಅ

*ಅಭಿಮತ ವರದಿ*

## ಸಂಘದಲ್ಲಿ ಕನ್ನಡ ಚಲನಚಿತ್ರ ಪ್ರದರ್ಶನ



ಕರ್ನಾಟಕ ಸರಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ದೆಹಲಿ ಕರ್ನಾಟಕ ವಾರ್ತಾ ಕೇಂದ್ರ ಹಾಗೂ ದೆಹಲಿ ಕರ್ನಾಟಕ ಸಂಘ ಇವರ ಸಂಯುಕ್ತಾಶ್ರಯದಲ್ಲಿ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಕನ್ನಡ ಚಲನಚಿತ್ರ ಪ್ರದರ್ಶನ ಹಾಗು ಕರ್ನಾಟಕ ಸರಕಾರದ ಯೋಜನೆಗಳ ಕುರಿತ ಸಾಕ್ಷ್ಯಚಿತ್ರ ಪ್ರದರ್ಶನ ಕಾರ್ಯಕ್ರಮವನ್ನು ಡಿಸೆಂಬರ್ 25ರಂದು ಏರ್ಪಡಿಸಲಾಗಿತ್ತು. ಕೇಂದ್ರ ಸರಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯದ ನಿರ್ದೇಶಕ ಶ್ರೀ ಕೆ. ನಾಗರಾಜ, ಕರ್ನಾಟಕ ಭವನದ ಜಂಟಿ ನಿವಾಸಿ ಆಯುಕ್ತ ಶ್ರೀ ಸಿ.ಜಿ. ಸುಪ್ರಸನ್ನ, ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ರಾಜ್ಯಸಭಾ ಸಚಿವಾಲಯ ಜಂಟಿ ನಿರ್ದೇಶಕ ಶ್ರೀ ಸೋಮಶೇಖರ್ ಅವರು ಸಭಿಕರನ್ನು ಉದ್ದೇಶಿಸಿ ಮಾತಾಡಿದರು. ಅ

*ಅಭಿಮತ ವರದಿ*

# ‘ಯಾ ದೇವಿ’ ನೃತ್ಯ ಕಾರ್ಯಕ್ರಮ







ಇಂಗ್ಲೇಂಡಿನ ದೇವಿಕಾ ಡ್ಯಾನ್ಸ್ ಥಿಯೇಟರ್ ತಂಡವು ಮಹಿಳಾ ಶಕ್ತಿಯ ಸಬಲೀಕರಣವನ್ನು ಪ್ರತಿಪಾದಿಸುವ ಕಥಕ್, ಭರತ ನಾಟ್ಯ, ಒಡಿಸ್ಸಿ, ಕೂಚಿಪುಡಿ ಮತ್ತು ಯಕ್ಷಗಾನ ಶೈಲಿಗಳಲ್ಲಿ ನೇಪಾಳ, ಬ್ರೆಜಿಲ್, ರೋಮ್ ಮತ್ತು ಭಾರತ ದೇಶಗಳ ನೃತ್ಯ ಸಂಪ್ರದಾಯಗಳ ಅಪ್ರತಿಮವಾದ ಅಂತರಾಷ್ಟ್ರೀಯ ಯಾ ದೇವಿ ಎಂಬ ನೃತ್ಯ ರೂಪಕ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಡಿಸೆಂಬರ್ 28ರಂದು ಪ್ರಸ್ತುತ ಪಡಿಸಿತು.

ಈ ನೃತ್ಯ ಕಾರ್ಯಕ್ರಮದ ನಿರ್ದೇಶಕಿ ಹಾಗೂ ಮುಖ್ಯ ನರ್ತಕಿ ದೇವಿಕಾ ರಾವ್ ಅವರ ಜತೆ ವಿದೇಶಿ ಮೂಲದ ಮಹಿಳೆಯರಾದ ಮ್ಯಾನ್ವೆಲಾ ಬೆನಿನಿ, ಅಲ್ರಿಕಾ ಅನೌಖಾ ಲಾರ್ಸನ್ ಮತ್ತು ಎದಿತ್ ಹಂಬಲ್ ಅವರು ವಿವಿಧ ಶೈಲಿಗಳಲ್ಲಿ ಮನಮಿಡಿಯುವ ಪ್ರದರ್ಶನವನ್ನು ನೀಡಿದರು.

ಆರಂಭದಲ್ಲಿ ನೇಪಾಳದ ದೇವತಾ ಕುಮಾರಿ ಪ್ರಥಾಚರಣೆಗೆ ಸಂಬಂಧಿಸಿದ ರೂಪಕ. ಸೃಷ್ಟಿ ಸೌಂದರ್ಯದಿಂದ ಸಮೃದ್ಧವಾದ ನೇಪಾಳದ ಕೊಳಲಿನ ನಾದ ಹಾಗೂ ಮದ್ದಳೆಗಳೊಂದಿಗೆ ಆರಂಭವಾಗುವ ಜೀವಂತ ಕುಮಾರಿ ದೇವತೆ ಗೆಳತಿಯರೊಂದಿಗೆ ಆಟವಾಡುವ ಹಾಗೂ ದೇವತೆಯಾಗ ಬಯಸುವ ಕನ್ನಿಕೆಯನ್ನು ಅನೇಕ ಪರೀಕ್ಷೆಗಳಿಗೆ ಒಳಪಡಿಸಿ ತೇರ್ಗಡೆ ಹೊಂದಿದ ತೇಜಸ್ವಿ ಹೆಣ್ಣು ಮಗುವನ್ನು ದೇವಾಲಯಕ್ಕೆ ಕೊಂಡೊಯ್ಯುವ ದೃಶ್ಯ ಮನಮೋಹಕವಾಗಿತ್ತು. ಈ ರೂಪಕ ಪ್ರೇಕ್ಷಕರಿಗೆ ನೇಪಾಳದ ಸಂಸ್ಕೃತಿಯನ್ನು ಪರಿಚಯಿಸಿತು.

ನಂತರ ಬ್ರೆಜಿಲ್‌ನ ಸಮುದ್ರ ದೇವತೆ ಎಂದು ಪ್ರಸಿದ್ಧವಾಗಿರುವ ಯಾಮಂಜ ರೂಪಕ – ಯಾಮಂಜ ದೇವಿಯು ಕಡಲ ಜೀವಿಗಳ ತಾಯಿಯೂ ಹೌದು. ಆಕೆ ಪ್ರಕೃತಿಯ ವಿಕೋಪದಿಂದ ಮೀನುಗಳನ್ನು ಹಾಗೂ ಮೀನುಗಾರರನ್ನು ರಕ್ಷಿಸುತ್ತಾಳೆ. ಇಂದಿಗೂ ಬ್ರೆಜಿಲ್‌ನ ಜನತೆ ಹುಣ್ಣಿಮೆಯ ದಿನ ಸಮುದ್ರ ದೇವಿ ಯಾಮಂಜಳ ಆರಾಧನೆ ಮಾಡುತ್ತಾರೆ. ಬ್ರೆಜಿಲ್‌ನ ಈ ಸಂಸ್ಕೃತಿಯ ಪರಿಚಯ ಕನ್ನಡಿಗರಿಗೆ ಒಂದು ಹೊಸ ಅನುಭವ.

ನೃತ್ಯದ ಮುಂದುವರಿದ ಭಾಗವಾಗಿ ರೋಮನ್ನರ ಪುರಾಣ ಕಥೆಗಳಲ್ಲಿನ ಕಾಡಿನ ದೇವತೆ ಡಯಾನ ವನ್ಯ ಜೀವಿಗಳ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣವಾಗುವ, ಸೌಂದರ್ಯ ದೇವತೆಯೂ ಹೌದು. ಅದರಂತೆ ವೀರನಾರಿ ಸೈನ್ಯದ ಸೇನಾಧಿಪತಿ ಎಂದು ವರ್ಣಿಸಲ್ಪಟ್ಟಿದ್ದಾಳೆ. ಇನ್ನೊಂದು ದೇಶದ ಸ್ತ್ರೀಯ ವಿವಿಧ ಮುಖಗಳ ಪರಿಚಯ ಈ ನೃತ್ಯದಿಂದ ದೊರೆತಂತಾಯಿತು.



ನೃತ್ಯದ ಅಂತಿಮ ಘಟ್ಟದಲ್ಲಿ ಭಾರತೀಯರ ಶಕ್ತಿ ದೇವತೆ ದುರ್ಗಾ. ಈ ರೂಪಕದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ, ಇಂದ್ರಾದಿಗಳೆಲ್ಲ ಒಟ್ಟು ಗೂಡಿ ಓಂಕಾರ ರೂಪಿಣಿಯಾದ ದುರ್ಗಾದೇವಿಯನ್ನು ಪ್ರಾರ್ಥಿಸುತ್ತಾರೆ. ಪ್ರತ್ಯಕ್ಷಳಾದ ದುರ್ಗಾ ಮಾತೆಯು ಸಿಂಹವಾಹಿನಿಯಾಗಿ ರಣರಂಗದಲ್ಲಿ ಚಂಡಮುಂಡ, ರಕ್ತಬೀಜ ಮೊದಲಾದ ರಾಕ್ಷಸರನ್ನು ಸಂಹರಿಸುತ್ತಾಳೆ. ಈ ದೃಶ್ಯದಲ್ಲಿ ದುರ್ಗೆಯ ಭೀಕರ ರೂಪವನ್ನು ಭಯಭಾವದಿಂದ ಕಾಣುವ ಸಂದರ್ಭ. ಒಂದು ಘಂಟೆ ಕಾಲದ ನೃತ್ಯ ರೂಪಕದಲ್ಲಿ ವಿಶ್ವದ ಮಹಿಳೆಯರಲ್ಲಿನ ಸಾಮ್ಯತೆ, ಮಹಿಳಾ ಸಬಲೀಕರಣ ಸಾಧ್ಯತೆಗಳ ಶೋಧನೆ, ಸಂಸ್ಕೃತಿ, ಕಾಲ, ಪರಂಪರೆ ಮತ್ತು ಸೃಜನಶೀಲತೆಯ ಅಪೂರ್ವ ಸಂಗಮದ ದರ್ಶನವಾಯಿತು. ಈ ನೃತ್ಯರೂಪಕದಲ್ಲಿ ಭರತನಾಟ್ಯ, ಒಡಿಸ್ಸಿ, ಕಥಕ್ ಹಾಗೂ ಛಾವೂ ನೃತ್ಯರೂಪಕಗಳು ಒಳಗೊಂಡಿದ್ದು ಒಂದು ವಿಶಿಷ್ಟ ಅನುಭೂತಿ. ಅ

*ಶಿವಾನಂದ ಇಂಗಳೇಶ್ವರ*

# ಸಂಘದ ಅಂಗಳದಾಚೆ ಸರ್. ವಿಶ್ವೇಶ್ವರಯ್ಯ ಮೋತಿಭಾಗ್ ಮೆಟ್ರೋ ಸ್ಟೇಶನ್






ದೆಹಲಿಯ ಬದುಕಿನ ನರನಾಡಿಯಾಗಿರುವ ದೆಹಲಿ ಮೆಟ್ರೋ ರೈಲು ತನ್ನ ವಿಸ್ತಾರವನ್ನು ಹೆಚ್ಚಿಸುತ್ತಲೇ ಇದೆ. ಈ ದಿಕ್ಕಿನಲ್ಲಿ, ದೆಹಲಿ ಕರ್ನಾಟಕ ಸಂಘದ ಅಂಗಳದಾಚೆ ಮೋತಿಭಾಗ್‌ನಲ್ಲಿ, ನಗರದಲ್ಲಿಯೇ ಅತಿ ಸಣ್ಣದೆನ್ನುವ ಮೆಟ್ರೋ ರೈಲು ನಿಲ್ದಾಣದ ಕಾರ್ಯವು ಭರದಿಂದ ನಡೆಯುತ್ತಿದೆ.

ಮೆಟ್ರೋ ಸ್ಟೇಶನ್ ಏಳುತ್ತಿದ್ದಂತೆ ಸಂಘದೊಳಗೆ ಕುಳಿತಿದ್ದ ಕಾರ್ಯಕಾರಿ ಸಮಿತಿಯು ಈ ಸ್ಟೇಶನ್ ಬರುವಾಗ ಅದಕ್ಕೆ ದೆಹಲಿ ಕರ್ನಾಟಕ ಸಂಘದ ಹೆಸರು ಇಡಬಹುದೇ ಎಂಬ ಆಲೋಚನೆಯಲ್ಲಿತ್ತು. ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ್ ಅವರು ಇತರ ಸದಸ್ಯರ ಜತೆಗೂಡಿ ಈ ಸ್ಟೇಶನ್‌ಗೆ ದೆಹಲಿ ಕರ್ನಾಟಕ ಸಂಘದ ಹೆಸರನ್ನು ಹೇಗಾದರೂ ಇಡುವಂತೆ ಮಾಡಬೇಕೆಂದು ಯೋಚಿಸಿದರು. ಸಂಘದ ಕಾರ್ಯಕಾರಿ ಸಮಿತಿಯ ನೇತಾರರು ಹಿಂದಿನ ಕೇಂದ್ರ ಸರಕಾರದಲ್ಲಿದ್ದ ಮಂತ್ರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯೋನ್ಮುಖರಾಗಿದ್ದರು.

ದೆಹಲಿ ಮೆಟ್ರೋ ರೈಲ್ವೇ ಕಾರ್ಪೋರೇಶನ್ ಆರಂಭದಿಂದಲೇ ತನ್ನ ಸ್ಟೇಶನ್‌ಗಳಿಗೆ ನಾಮಕರಣ ಮಾಡುವಾಗ ತನ್ನದೇ ಆದ ನಿಯಮಗಳನ್ನು ತಂದಿದೆ. ಆದರೆ ಇತ್ತೀಚೆಗೆ ತನ್ನ ನಿಯಮದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿತ್ತು. ಹಾಗಾಗಿ ಸಂಘ ಒಂದು ಪ್ರಾದೇಶಿಕ ಭಾಷೆಯವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿರುವುದರಿಂದ ಈ ಹೆಸರನ್ನು ಇಡುವರೇ ಎಂಬ ಅಳುಕಿತ್ತು.

ಸಂಘದ ಹೆಸರಿನ ಬದಲಾಗಿ ಭಾರತವು ಪೂಜಿಸುವಂತಹ ಸಿವಿಲ್ ಇಂಜಿನಿಯರ್ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಹೆಸರನ್ನೂ ಸಂಘವು ಸೂಚಿಸುವಂತೆ ಸಮಿತಿಯ ಸಭೆಯಲ್ಲಿದ್ದ














ಹಿರಿಯ ಕನ್ನಡಿಗ ಶ್ರೀ ಐ. ರಾಮಮೋಹನ್ ರಾವ್ ಸೇರಿದಂತೆ ಕೆಲವರು ಸಲಹೆ ಮಾಡಿದರು. ಭಾರತದ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಒಂದು ಮಹಾನ್ ಕ್ರಾಂತಿಕಾರಿ ಇತಿಹಾಸವನ್ನು ನಿರ್ಮಿಸಿದ ದೆಹಲಿ ಮೆಟ್ರೋ ರೈಲ್ವೇ ಕಾರ್ಪೋರೇಶನ್ ಈ ಹೆಸರನ್ನು ತಳ್ಳಿ ಹಾಕುವಂತಹ ಸಾಧ್ಯತೆಗಳಿರಲಿಲ್ಲ.

ಸಂಘದ ಭಾವನಾತ್ಮಕವಾದ ಒತ್ತಾಸೆಯನ್ನು ತಾಂತ್ರಿಕವಾಗಿ ಮತ್ತು ಆಡಳಿತಾತ್ಮಕವಾಗಿ ಕಾರ್ಯರೂಪಕ್ಕೆ ತರಲು, ರಾಜಕೀಯವಾದ ಒತ್ತಡಗಳ ಅವಶ್ಯಕತೆಯಿತ್ತು. ಕೇಂದ್ರದಲ್ಲಿ ಹೊಸ ಸರಕಾರ ಬಂದಾಗ ಕರ್ನಾಟಕದಿಂದ ಆರಿಸಿ ಬಂದ ಸಂಸದರನ್ನು ಮತ್ತು ಮಂತ್ರಿಗಳನ್ನು ಅಭಿನಂದಿಸುವ ಸಂದರ್ಭದಲ್ಲಿ ಇದೇ ವಿಚಾರವನ್ನು ಅವರ ಮುಂದಿಟ್ಟಾಗ ಅವರೆಲ್ಲರೂ ಸಹಮತ ವ್ಯಕ್ತಪಡಿಸಿದ್ದರು. ಕನ್ನಡಿಗರ ಸೌಭಾಗ್ಯವೋ ಎಂಬಂತೆ ಕರ್ನಾಟಕದಿಂದ ರಾಜ್ಯಸಭೆಗೆ ಆರಿಸಿಬಂದ ಶ್ರೀ ವೆಂಕಯ್ಯ ನಾಯ್ಡು ಅವರು ಕೇಂದ್ರ ನಗರಾಭಿವೃದ್ಧಿ ಸಚಿವರೂ ಆದರು. ಅವರು ತಮ್ಮ ಪ್ರಭಾವವನ್ನು ಬೀರಿ ದೆಹಲಿ ಮೆಟ್ರೋ ರೈಲ್ವೇ ಕಾರ್ಪೋರೇಶನ್‌ಗೆ ಮಾಡಿದ ಮನವಿಯಂತೆ ಮೆಟ್ರೋ ಸಂಸ್ಥೆಯವರು ಮೋತಿಭಾಗ್‌ನಲ್ಲಿ ಆಗುತ್ತಿರುವ ಹೊಸ ಸ್ಟೇಶನ್‌ಗೆ ಸರ್.ಎಂ. ವಿಶ್ವೇಶ್ವರಯ್ಯ ಮೋತಿಭಾಗ್ ಎಂಬ ಹೆಸರನ್ನಿಟ್ಟು ದೆಹಲಿಯಲ್ಲಿ ಕನ್ನಡಿಗರ ಅಸ್ತಿತ್ವಕ್ಕೆ ಹೊಸದಾದ ಆಯಾಮವನ್ನು ನೀಡಿದ್ದಾರೆ.

ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು 1912ರಲ್ಲಿ ಮೈಸೂರು ಸಂಸ್ಥಾನದ ದಿವಾನರಾಗಿ ನೇಮಕಗೊಂಡರು. ಅವರು ನಿರ್ಮಿಸಿದ ಕೃಷ್ಣರಾಜ ಸಾಗರ ಅಣೆಕಟ್ಟು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಸಕ್ಕರೆ ಕಾರ್ಖಾನೆ, ಮೈಸೂರು ಸ್ಯಾಂಡಲ್ ಸೋಪ್ ಫ್ಯಾಕ್ಟರಿ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಬೆಂಗಳೂರಿನಲ್ಲಿ ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್(ಎಚ್‌ಎಎಲ್), ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಕನ್ನಡ ಸಾಹಿತ್ಯ ಪರಿಷತ್, ಜೋಗದ ಜಲವಿದ್ಯುತ್ ಯೋಜನೆ ವಿಶ್ವೇಶ್ವರಯ್ಯನವರನ್ನು ಅಜರಾಮರನನ್ನಾಗಿಸಿವೆ. ಅವರು ಕೇವಲ ಮೈಸೂರು ಪ್ರಾಂತ್ಯವಲ್ಲದೇ ದೇಶದ ವಿವಿದೆಡೆ ಹಲವಾರು ದೂರದೃಷ್ಟಿಯ, ಉನ್ನತ ತಂತ್ರಜ್ಞಾನಗಳ ಇಂಜಿನೀಯರಿಂಗ್ ಕಾರ್ಯಗಳನ್ನು ನೆರವೇರಿಸಿದ್ದಾರೆ. ಬ್ರಿಟಿಷ್ ಸರಕಾರವು ಅವರಿಗೆ ನೈಟ್ ಪದವಿಯನ್ನು ನೀಡಿದರೆ ಭಾರತ ಸರಕಾರವು ಅತ್ಯಂತ ಗೌರವಯುತವಾದ ಭಾರತರತ್ನ ಪ್ರಶಸ್ತಿಯನ್ನು ನೀಡಿದೆ.

ದೆಹಲಿಯಲ್ಲಿ ಕರ್ನಾಟಕದ ಪ್ರಾತಿನಿಧ್ಯವನ್ನು ಕಲೆ, ಸಂಸ್ಕೃತಿ, ಶಿಕ್ಷಣ, ಭಾಷೆ, ಸಾಹಿತ್ಯದ ಮೂಲಕ ಬೆಳೆಸುತ್ತಿರುವ ದೆಹಲಿ ಕರ್ನಾಟಕ ಸಂಘವು ಕರ್ನಾಟಕದ ಮಹಾನ್ ಚೇತನವನ್ನು ದೆಹಲಿಯಲ್ಲಿ ಶಾಶ್ವತವನ್ನಾಗಿಸಲು ಮಾಡಿದ ಪ್ರಯತ್ನಕ್ಕೆ ಯಶಸ್ಸು ಸಿಕ್ಕಿದೆ. ಅ

***ಅಭಿಮತ ವರದಿ***

# ಮನ ಮಿಡಿದ ಉರುಗವ್ವ

ಮಾಜಿ ಮುಖ್ಯಮಂತ್ರಿ ದೇವರಾಜು ಅರಸು ಅವರು ಕರ್ನಾಟಕದಲ್ಲಿ ಪರಿಣಾಮಕಾರಿಯಾಗಿ ಜ್ಯಾರಿಗೊಳಿಸಿದ ಭೂಮಸೂದೆಯ ಪರಿಣಾಮಗಳು ಹಲವು. ಹಲವು ಜನ ಭೂಮಾಲಕರು ನೆಲ ಕಳೆದುಕೊಂಡರೆ, ಹಲವು ಜನ ಬಡವರು ನೆಲ ಪಡೆದುಕೊಂಡರು. ಕ್ರಾಂತಿಕಾರಕವಾದ ಈ ಭೂ ಪರಿವರ್ತನೆಯ ಸಂದರ್ಭದ ಒಳ ಸುಳಿವುಗಳು ಹಲವು. ಮಸೂದೆ ಜ್ಯಾರಿಯಾಗುವುದನ್ನು ಮೊದಲೇ ತಿಳಿದಿದ್ದ ಕೆಲವರು ಜಾಣತನದಿಂದ ಒಕ್ಕಲುಗಳನ್ನು ಎಬ್ಬಿಸಿ ಭೂಮಿಯನ್ನು ತನ್ನ ವಶದಲ್ಲಿಯೇ ಇರಿಸಿಕೊಂಡರು. ಕೆಲವರು ಒಕ್ಕಲುಗಳಿಗೇ ನೆಲವನ್ನು ಮಾರಿ, ಸಿಕ್ಕಿದ ಹಣವನ್ನು ಕೈಗಾರಿಕೆಗಳಲ್ಲಿ ತೊಡಗಿಸಿ ಮತ್ತೆ ಶ್ರೀಮಂತರಾಗಿಯೇ ಉಳಿದರು. ಅನೇಕ ಅಮಾಯಕರು ಇದ್ದ ಭೂಮಿಯನ್ನು ಕಳೆದುಕೊಂಡು ಹುಚ್ಚರಾದರು. ಮತ್ತೆ ಕೆಲವರು ಸಿಕ್ಕಿದ ಭೂಮಿಯನ್ನು ಮಾರಿ, ಮತ್ತೆ ಬಡತನದ ಬೆಂಕಿಯಲ್ಲಿ ಉರಿದು ಹೋದರು.

ಈಗ ಸರಕಾರೀ ಅಂಕಿ ಅಂಶಗಳಲ್ಲಿ ನಿರ್ಜೀವವಾಗಿ ಸಿಗುವ ಮಾಹಿತಿಗಳನ್ನು ಹೊರತು ಪಡಿಸಿದರೆ, ಭೂಮಸೂದೆಯ ಜೈವಿಕ ಪರಿಣಾಮಗಳನ್ನು ಸೃಜನಾತ್ಮಕವಾಗಿ ಕನ್ನಡದಲ್ಲಿ ದಾಖಲಿಸಿದವರು ಇಲ್ಲವೆಂಬಷ್ಟು ಕಡಿಮೆ. ಹಾಗೆ ದಾಖಲಿಸಿದ ಕೆಲವರಲ್ಲಿ ಕತೆಗಾರ ಡಾ. ಬೆಸಗರಹಳ್ಳಿ ರಾಮಣ್ಣ ಒಬ್ಬರು. ರಾಮಣ್ಣನವರು ಪ್ರಕಟಿಸಿದ್ದ ನೆಲದ ಒಡಲು, ಗರ್ಜನೆ, ನೆಲದ ಸಿರಿ, ಒಂದು ಹುಡುಗನಿಗೆ ಬಿದ್ದ ಕನಸು, ತೋಳಗಳ ನಡುವೆ, ಹಾಗೂ ಕೊಳಲು ಮತ್ತು ಖಡ್ಗ ಕಥಾ ಸಂಕಲನಗಳಲ್ಲಿ ಮತ್ತೆ ಮತ್ತೆ ನೆಲದ ಸಮಸ್ಯೆಯ ಕುರಿತು ಒಳನೋಟಗಳಿವೆ. ಅವರು ನೆಲವನ್ನು ಬರೇ ಮಣ್ಣೆಂದು ಭಾವಿಸುವುದಿಲ್ಲ. ಬದಲು ಅದು ಮಾನವ ಪ್ರಕೃತಿ ಮತ್ತು ನಿಸರ್ಗ ವ್ಯಾಪಾರಗಳ ನಡುವೆ ಸೇರಿಕೊಂಡ ಒಂದು ಘಟಕ. ಈ ಸಂಕೀರ್ಣ ಸಂಬಂಧ ನಿಷ್ಕರ್ಷೆಯಲ್ಲಿ ಕೆಲವು ಬಾರಿ ನಿಸರ್ಗ ಗೆಲುವು ಸಾಧಿಸಿದರೆ, ಕೆಲವು ಬಾರಿ ಮಾನವ ಗೆಲುವು ಸಾಧಿಸುತ್ತಾನೆ. ಎಲ್ಲೆಲ್ಲಿ ನಿಸರ್ಗ ಗೆಲುವು ಸಾಧಿಸುತ್ತದೆಯೋ ಅಲ್ಲಿ ಗ್ರಾಮೀಣ ಪರಿಸರದ ಪಾತ್ರಗಳು ವಿಜೃಂಭಿಸಿದರೆ, ಎಲ್ಲೆಲ್ಲಿ ಮಾನವ ಜಯ ಸಾಧಿಸುತ್ತಾನೆಯೋ ಅಲ್ಲಿ ಆಧುನಿಕತೆ ಪ್ರವೇಶ ಮಾಡಿರುತ್ತದೆ. ರಾಮಣ್ಣ ಅವರಿಗೆ ಹೆಸರು ತಂದುಕೊಟ್ಟ 'ಜೀತ' ಕತೆ ಇದಕ್ಕೆ ಒಳ್ಳೆಯ ಉದಾಹರಣೆ. ಬಹಳ ವಿಶಿಷ್ಟವಾದ ತಾಯಿ ಮತ್ತು ಧರ್ಮ ಕತೆಗಳು ರಾಮಣ್ಣನವರ ಮಾನವೀಯ ಕಳಕಳಿ ಎಷ್ಟು ವಿಸ್ತಾರವಾದುದು ಮತ್ತು ಉದಾರವಾದುದು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಈ ಕತೆಗಳು ಭೂ ಮಸೂದೆ ಕಾಲದ ಕೆಲವು ಘಟನೆಗಳನ್ನು ದಿಟ್ಟವಾಗಿ ನಮ್ಮ ಮುಂದಿಡುತ್ತದೆ.

ದೆಹಲಿ ಕರ್ನಾಟಕ ಸಂಘದಲ್ಲಿ ಈಚೆಗೆ ಬೆಸಗರಹಳ್ಳಿಯವರ ತಾಯಿ ಕತೆಯನ್ನು ಉರುಗವ್ವ ನಾಟಕವಾಗಿ (ನಾಟಕ ರೂಪ : ಡಾ. ಎಂ. ಬೈರೇಗೌಡ) ಪ್ರಸ್ತುತ ಪಡಿಸಲಾಯಿತು. ನಾಟಕಕಾರರು ತಮ್ಮ ನಾಟಕದ ಕುರಿತು ಹೀಗೆ ಹೇಳಿಕೊಂಡಿದ್ದಾರೆ– 'ಗೋಳೀಕರಣ, ನಗರೀಕರಣ, ಮುಕ್ತಮಾರುಕಟ್ಟೆಗಳ ಭರಾಟೆಯಲ್ಲಿ ನಲುಗುತ್ತಿರುವ ದಮನಿತರ ಕೂಗಿಗೆ ಬೆಲೆಯೇ ಇಲ್ಲ. ಎಲ್ಲವೂ ವ್ಯಾಪಾರದ ಸರಕಾಗಿರುವ ಈ ಕಾಲಘಟ್ಟದಲ್ಲಿ ಮಾನವೀಯತೆ ಮರುಭೂಮಿಯಲ್ಲಿನ ಓಯಸಿಸ್‌ನಂತಾಗಿದೆ. ಭೂಗಳ್ಳರು ಮತ್ತು ಅಧಿಕಾರಶಾಹಿಗಳು ತಮ್ಮ ಕಬಂಧ ಬಾಹುಗಳಿಂದ ತಳಸಮುದಾಯಗಳನ್ನು ಬಿಗಿದಪ್ಪಿ ಪ್ರಾಣ ಹಿಂಡುತ್ತಿದ್ದಾರೆ. ಅಂಥ ಧೃತರಾಷ್ಟ್ರ ಅಪ್ಪುಗೆಯಿಂದ ಪಾರಾಗಲು ಪರಿತಪಿಸುವ ಜೀವಗಳ ಕಥೆಯೇ ಉರುಗವ್ವ ನಾಟಕ. ಉಳ್ಳವರ ಕ್ರೌರ್ಯಕ್ಕೆ ಬಲಿಯಾಗುತ್ತಿರುವವರ ಪ್ರತಿನಿಧಿಗಳಾಗಿ ಪಾತ್ರಗಳು ಮೈತಳೆದಿವೆ. ಗ್ರಾಮೀಣ ಬದುಕಿನ ಚಿತ್ರಣಗಳ ಮೂಲಕ ಇಡೀ ವಿಶ್ವದ ಮನುಕುಲದ ಆಗುಹೋಗುಗಳನ್ನು ಈ ನಾಟಕ ಅನಾವರಣಗೊಳಿಸುತ್ತಿದೆ.' ಹೀಗೆ ಗ್ರಾಮೀಣ ಪರಿಸರದ ನೆಲದ ಮೂಲ ಸಮಸ್ಯೆಯನ್ನು ಜಾಗತೀಕರಣದ ಚೌಕಟ್ಟಿನಲ್ಲಿ ಹಿಡಿದಿಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಈ ಅರ್ಥದಲ್ಲಿ ನಾಟಕವು ಅತ್ಯಂತ ಸಮಕಾಲೀನವಾಗಿದೆ. ಪ್ರತಿಭಾವಂತ ನಿರ್ದೇಶಕ ಶಿವಾನಂದ ಇಂಗಳೇಶ್ವರ ಅವರು ಸೀಮಿತ ಪ್ರತಿಭೆಯ ನಟರಿಂದ ಅತ್ಯುತ್ತಮವಾದದ್ದನ್ನು ಸಾಧ್ಯವಾಗಿಸಿದ್ದಾರೆ. ಈಗಾಗಲೇ ನಾ ಸತ್ತಿಲ್ಲ, ಅತ್ತೆಗೆ ಲತ್ತೆ, ಮೊಬೈಲಾಯಣ, ತ್ಯಾಗಿ, ಮೊದಲಾದ ನಾಟಕಗಳನ್ನು ನಿರ್ದೇಶಿಸಿ ಜನಪ್ರಿಯರಾಗಿರುವ ಅವರು ಉರುಗವ್ವ ನಾಟಕದ ಮೂಲಕ ತಾನೊಬ್ಬ ಪ್ರಬುದ್ಧ ನಿರ್ದೇಶಕ ಎಂಬುದನ್ನು ಸಾಬೀತು ಪಡಿಸಿದ್ದಾರೆ. ಪಯಣ, ನಾ ಸತ್ತಿಲ್ಲ, ಅಪ್ಪ, ಇದು ಕಾರಣ, ಬಾಗಿಲು ಮೊದಲಾದ ಸದಭಿರುಚಿಯ ನಾಟಕಗಳನ್ನು ನೀಡಿದ ದಿನಕರ (ದಿಲ್ಲಿ ನಗರ ಕನ್ನಡ ಕಲಾವಿದರ ರಂಗ) ತಂಡವು ಈ ನಾಟಕದ ಮೂಲಕ ದೆಹಲಿ ಕನ್ನಡಿಗರ ಪ್ರತಿಷ್ಠೆಯನ್ನು ಗಣನೀಯವಾಗಿ ಎತ್ತರಿಸಿದೆ.

ಉರುಗವ್ವ ನಾಟಕದ ವಸ್ತು ಈಗಾಗಲೇ ಹೇಳಿದಂತೆ, ನೆಲದ ಒಡೆತನಕ್ಕೆ ಸಂಬಂಧಿಸಿದ್ದು. ಚನ್ನಕ್ಕಳಿಗೆ ಸೇರಿದ ಜಮೀನನ್ನು ಕಾಯಿಲೆಯಿಂದ







ಮಲಗಿದ್ದ ಉರುಗವ್ವನಿಗೆ (ಮಂಜುಳಾ ನಾಗರಾಜ್) ಮಗ ಪುಟ್ರಾಜನ (ರಾಜಕುಮಾರ್ ) ಸಹಾಯದಿಂದ ಊರಿನ ಜಮೀನ್ದಾರ ಚಂದ್ರು ಶೆಟ್ಟಿ (ಎ.ಟಿ. ಶ್ರೀನಿವಾಸ) ಅಪಹರಿಸಲು ಪ್ರಯತ್ನಿಸುತ್ತಾನೆ. ಈ ಅಪಹರಣ ಪ್ರಕ್ರಿಯೆಗೆ ಊರಿನ ಹಲವರು ಮೌನವಾಗಿ ಸಹಕರಿಸುತ್ತಾರೆ. ಆದರೆ ಜಿಲ್ಲೆಯ ತರುಣ ಜಿಲ್ಲಾಧಿಕಾರಿಯವರ (ದಿಲೀಪ್ ಬಾಪಟ್) ಸಮಯೋಚಿತ ನಡವಳಿಕೆಯಿಂದಾಗಿ ಈ ಭೂಮಿ ಚನ್ನಕ್ಕಳದಾಗಿಯೇ ಉಳಿಯುತ್ತದೆ. ಈ ನಡುವೆ, ಇಂಥ ಘಟನೆಗಳ ಜತೆಗೆ ಸರಕಾರೀ ಕಛೇರಿಯಲ್ಲಿ ಕುಳಿತು ತನ್ನ ಕೆಲಸಗಳನ್ನು ನಡೆಸುತ್ತಿರುವ ಗುಮಾಸ್ತ ರಾಮು (ಸಖಾರಾಮ ಉಪ್ಪೂರು), ಲಂಚಕ್ಕೆ ಹಾತೊರೆಯುವ ಜವಾನ ಮಹಾದೇವ (ಎಸ್. ಕುಮಾರ್), ತಹಶಿಲ್ದಾರ್ (ಎಫ್. ಎ. ಹಕೀಮ), ಕಷ್ಟಗಳನ್ನು ಜಿಲ್ಲಾಧಿಕಾರಿ ವರೆಗೆ ತಲುಪಿಸುವ ಚನ್ನಕ್ಕ (ಎಸ್.ಸಿ. ಹೇಮಲತ), ಶೆಟ್ಟರ ಗುಂಪಿಗೆ ಚಾಯ, ದೋಸೆ ಮಾಡಿಕೊಡುವ ಬಡ ಹೋಟೆಲ್ ಮಾಲೀಕ (ವೈ. ಅವನೀಂದ್ರನಾಥ್ ರಾವ್), ನಾಗರೀಕರ ಗುಂಪು ಮತ್ತಿತರರು ಬಂದು ಹೋಗುತ್ತಾರೆ. ಇವ್ಯಾವೂ ಸ್ವತಂತ್ರವಾಗಿ ನಡೆದಂತಿರದೆ, ನಾಟಕದ ಮುಖ್ಯ ವಸ್ತುವಿಗೆ ಪೂರಕವಾಗಿ ನಡೆಯುತ್ತಾ ಹೋಗುವುದು ನಿರ್ದೇಶಕರ ಜಾಣ್ಮೆಯನ್ನು ತೋರಿಸುತ್ತದೆ.

ನಿಂಗನೆಂಬ ಹುಚ್ಚನೊಬ್ಬನ ಪ್ರವೇಶ (ಮಹಾದೇವ) ತಾಂತ್ರಿಕವಾಗಿ ನಾಟಕದ ಕೆಲವು ಘಟನೆಗಳನ್ನು ವ್ಯಂಗ್ಯಕ್ಕೆ ಹಚ್ಚುತ್ತಾ ಹೋಗುತ್ತದೆ. ಮಾಮೂಲೀ ನಾಟಕಗಳಲ್ಲಿ ನಿರೂಪಕನಾಗಿಯೋ, ಭವಿಷ್ಯ ಹೇಳುವವನಾಗಿಯೋ ಬರುವ ರಂಗಿನ ಪಾತ್ರ ಇಲ್ಲಿ ಹರಿದ ಬಟ್ಟೆಯ ಹುಚ್ಚನಾಗಿ ಬಂದದ್ದು ನಾಟಕಕ್ಕೆ ಒಂದು ಬಗೆಯ ಸಣ್ಣ ದುರಂತದ ಆಯಾಮವನ್ನು ಒದಗಿಸಿಕೊಟ್ಟಿದೆ. ಸೀಮಿತ ಸಂಗೀತ ನಾಟಕದ ವಸ್ತುವಿನ ಗಹನತೆಯನ್ನು ಹೆಚ್ಚಿಸಿದೆ.

ನಾಟಕದ ತುಂಬ ಹರಡಿಕೊಂಡ ಪಾತ್ರಗಳು ಮುಖ್ಯವಾಗಿ ಎರಡು. ಉರುಗವ್ವ ಮತ್ತು ನಿಂಗ. ಈ ಎರಡೂ ಪಾತ್ರಗಳೂ ಪ್ರೇಕ್ಷಕರನ್ನು ತಣ್ಣಗೆ ಆವರಿಸಿಕೊಳ್ಳುತ್ತವೆ. ಇಷ್ಟಿದ್ದರೂ ಉರುಗವ್ವನ ಪಾತ್ರ ಇನ್ನಷ್ಟು ಪ್ರಖರವಾಗಿ ರಂಗದಲ್ಲಿ ಹೊಮ್ಮಿದ್ದರೆ, ಹುಚ್ಚನ ಪಾತ್ರದ ರಂಗ ಪ್ರವೇಶದ ಸಂಖ್ಯೆ ಅರ್ಧದಷ್ಟು ಕಡಿಮೆಯಾಗಿದ್ದರೆ, ನಾಟಕದ ಅವಧಿ ಸುಮಾರು 90 ನಿಮಿಷಗಳಿಗಾಗುವಷ್ಟು ಕಡಿತಗೊಂಡಿದ್ದರೆ, ನಾಟಕದ ಪರಿಣಾಮ ಇಮ್ಮಡಿಯಾಗಬಹುದಿತ್ತು.

ದೆಹಲಿಯ ಚಳಿಯಲ್ಲಿ ತುಂಬ ಕಾಲ ನೆನಪಿಡಬಲ್ಲ ಮತ್ತು ಮನಮುಟ್ಟುವ ನಾಟಕ ನೀಡಿದ ದಿನಕರ ತಂಡಕ್ಕೆ ಅಭಿನಂದನೆಗಳು. ಅ

***ಡಾ. ಪುರುಷೋತ್ತಮ ಬಿಳಿಮಲೆ***







**ಅನಿಸಿಕೆ**

## ದೆಹಲಿಯ ರಂಗಕರ್ಮಿಗಳ ಗಟ್ಟಿ ಪ್ರಯೋಗ : ಉರುಗವ್ವ

ಮಾನವೀಯತೆ, ಮಮಕಾರ, ಪ್ರೀತಿ ವಿಶ್ವಾಸದಿಂದೊಡಗೂಡಿದ ನಿಂಗನ ಸಂಸಾರದಲ್ಲಿ ಶೆಟ್ಟಿಯ ದುರಾಸೆಯ ಫಲ ಆತನ ಕುಟುಂಬ ಅಗ್ನಿ ಆಹುತಿಗೆ ಬಲಿಯಾಗಿ, ಮಾನಸಿಕ ವಿಚಲಿತನಾಗಿ ಸಾಮಾಜಿಕ ವಿಡಂಬನೆಗೈದು ಕಥೆಗೆ ಮುನ್ನುಡಿಯಾಗುವ ಪಾತ್ರ ನಿಂಗ (ಮಹಾದೇವ್) ಸಾಮಾಜಿಕ ಪರಿವರ್ತನೆಗೆ ನಾಂದಿ ಹಾಡಿದ. ಒಲ್ಲದ ಮನಸ್ಸಿನಲ್ಲೂ ಗ್ರಾಮಸ್ಥರನ್ನೇ ಅನಿವಾರ್ಯವಾಗಿ ಜಮೀನ್ದಾರಿ ಪದ್ಧತಿಗೆ ಶರಣಾಗಿ ಅನುಯಾಯಿಗಳನ್ನಾಗಿಸಿದ ಪಾತ್ರ ಶೆಟ್ಟಿ (ಎ.ಟಿ. ಶ್ರೀನಿವಾಸ) ಕಣ್ಣಿಗೆ ಕಟ್ಟುವಂತಿತ್ತು. ಹಣದ ದುರಾಸೆಗೆ ಒಳಗಾಗಿ ಶೆಟ್ಟಿಯಂತಹ ಕಪಟಿಗಳಿಗೆ ಪೂರಕವಾಗಿ ಕೆಲಸ ಮಾಡುತ್ತಿದ್ದ ಗ್ರಾಮ ಲೆಕ್ಕಿಗ ಪಾತ್ರ ಪುಟ್ಟರಾಜು (ರಾಜಕುಮಾರ್), ಶೇಕ್ದಾರ್(ಅಮರೇಶ್), ತಹಶಿಲ್ದಾರ್ (ಎಫ್. ಎ. ಹಕೀಮ್), ಆಡಳಿತ ವ್ಯವಸ್ಥೆಯನ್ನು ಅಣಕಿಸುವಂತಿತ್ತು. ಇಡೀ ಗ್ರಾಮವೇ ಜಮೀನ್ದಾರಿ ಪದ್ಧತಿಗೆ ಶರಣಾಗಿ ದೌರ್ಜನ್ಯಕ್ಕೆ ಮಣಿದು ಅಸಹಾಯಕವಾಗಿ ಪರಿಸ್ಥಿತಿಗೆ ಪೂರಕವಾಗಿ ಸಾಕ್ಷಿ ಹೇಳುವ ಸಂದರ್ಭದಲ್ಲಿ ಗ್ರಾಮ ಲೆಕ್ಕಿಗನ ತಾಯಿ ಉರುಗವ್ವ ಪ್ರಾಮಾಣಿಕತೆ, ಮಾನವೀಯತೆ ಉಳಿವಿಗೆ ತನ್ನ ಮಗನ ವಿರುದ್ಧ ನಿಷ್ಠಾವಂತ ಡಿಸಿಗೆ ಪಂಚನಾಮದಲ್ಲಿ ಸತ್ಯ ನುಡಿದು ತನ್ನ ಮಗನೂ ತಪ್ಪೊಪ್ಪಿಕೊಳ್ಳುವಂತೆ ಪರಿವರ್ತಿಸಿ ಸತ್ಯ ಉಳಿಸಿ ಅಮರಳಾದಳು. ಉರುಗವ್ವನ ಪಾತ್ರದಲ್ಲಿ ಮಂಜುಳ ನಾಗರಾಜ ಅವರ ಅಭಿನಯ ಪ್ರಾಮಾಣಿಕತೆಯ ಪ್ರಜ್ಞೆ ಮೂಡಿಸಿತು. ಸಾಮಾಜಿಕ ಪರಿವರ್ತನೆ ಪಾರದರ್ಶಕ ಆಡಳಿತ ಸನ್ನಿಹಿತವಾಗಿ ನಿಷ್ಠಾವಂತ ಡಿಸಿ(ದಿಲೀಪ್ ಬಾಪಟ್) ಪಾತ್ರ ಮೆಚ್ಚುಗೆ ಗಳಿಸಿತು.

ನಾಟಕದ ಸುಮಾರು 40 ಪಾತ್ರಗಳಿಗೆ ಸರ್ಕಾರಿ ನೌಕರರು ಮತ್ತು ಸ್ಥಳೀಯ ಕಲಾವಿದರನ್ನು ಆಯ್ಕೆ ಮಾಡಿ ಪಾತ್ರಗಳಿಗೆ ನೈಜ ಜೀವ ತುಂಬಿದ ಕೀರ್ತಿ ಹಿರಿಯ ರಂಗ ಕರ್ಮಿ ಹಾಗೂ ನಾಟಕ ನಿರ್ದೇಶಕ ಶಿವಾನಂದ ಇಂಗಳೇಶ್ವರ ಅವರಿಗೆ ಸಲ್ಲುತ್ತದೆ. ನಾಟಕಕ್ಕೆ ಆಧುನಿಕ ತಂತ್ರಜ್ಞಾನ ಬಳಸಿ ಪ್ರೇಕ್ಷಕರನ್ನು ಮಂತ್ರ ಮುಗ್ಧರನ್ನಾಗಿಸಿದ ಸಂತೋಷಕುಮಾರ್ ಉಪಾಧ್ಯಾಯ ಅವರ ಶ್ರಮ ಶ್ಲಾಘನೀಯ. ಈ ಪ್ರದರ್ಶನಕ್ಕೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಪದಾಧಿಕಾರಿಗಳು ಹಾಗೂ ದೆಹಲಿ ಕನ್ನಡಿಗರು ಪ್ರೋತ್ಸಾಹಿಸಿ ಉತ್ತಮ ಪ್ರದರ್ಶನ ಮೂಡಿಬರಲು ಕಾರಣರಾದರು. ಅ

***ನೇತ್ರಾವತಿ ಕುಮಾರ್***

## ಸಂಘದಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ

# ಕೇಂದ್ರೀಯ ಜಾನಪದ ಅಕಾಡೆಮಿಯ ಸ್ಥಾಪನೆಗೆ ಒತ್ತಾಯ











'ಭಾರತದ ತಳಸಮುದಾಯಗಳಲ್ಲಿ ವ್ಯಾಪಕವಾಗಿರುವ ಬಹುರೂಪೀಯ ಜಾನಪದದ ವಿವರವಾದ ಸರ್ವೇಕ್ಷಣೆ ನಡೆಸುವುದಲ್ಲದೇ, ಅದನ್ನು ವಿವಿಧ ರೂಪಗಳಲ್ಲಿ ಸಂರಕ್ಷಿಸಲು ರಾಷ್ಟ್ರೀಯ ಮಟ್ಟದಲ್ಲಿ ಜಾನಪದ ಅಕಾಡೆಮಿಯ ಸ್ಥಾಪನೆಯ ಅನಿವಾರ್ಯತೆಯಿದೆ' ಎಂದು ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಜಾನಪದ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ವಿದ್ವಾಂಸರು ನಿರ್ಣಯ ಕೈಗೊಂಡರು.

ಭಾರತದಾದ್ಯಂತ ಮೌಖಿಕ ರೂಪದಲ್ಲಿ ಪ್ರಚಲಿತದಲ್ಲಿರುವ ಸಾಂಸ್ಕೃತಿಕ ಪರಂಪರೆಯ 'ದಾಖಲೀಕರಣ, ಸಂಕ್ಷರಣೆ ಮತ್ತು ಪೋಷಣೆ' ಎಂಬ ವಿಷಯದ ಮೇಲೆ ದೆಹಲಿ ಕರ್ನಾಟಕ ಸಂಘ, ತಿರುಪತಿಯ ಭಾರತೀಯ ಜಾನಪದ ಸಂಸ್ಥೆ ಮತ್ತು ತಿರುವನಂತಪುರದ ದಕ್ಷಿಣ ಭಾರತೀಯ ಭಾಷೆಗಳ ಜಾನಪದ ಸಂಸ್ಥೆಗಳು ಜತೆ ಸೇರಿ ದೆಹಲಿಯಲ್ಲಿ ಇದೇ ಡಿಸೆಂಬರ್ 5ರಿಂದ 7ರ ವರೆಗೆ ಮೂರು ದಿನಗಳ ಅತ್ಯಂತ ಮಹತ್ವದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿದ್ದುವು.

ಭಾರತೀಯ ಇತಿಹಾಸ ಸಂಶೋಧನಾ ಮಂಡಳಿಯ ಅಧ್ಯಕ್ಷ ಪ್ರೊ. ವೈ. ಸುದರ್ಶನ ರಾವ್ ಅವರು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಡಿಸೆಂಬರ್ 5ರಂದು ವಿಚಾರ ಸಂಕಿರಣವನ್ನು ದೀಪ ಬೆಳಗಿಸಿ ಉದ್ಘಾಟಿಸಿದರು. ತಿರುಪತಿಯ ಡಾ. ಭಕ್ತವತ್ಸಲ ರೆಡ್ಡಿ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದ ಜಾನಪದ ವಿದ್ವಾಂಸರಾದ ಡಾ. ಬಿ.ಎ. ವಿವೇಕ ರೈ ಅವರು ವಿಶೇಷ ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ಭಾರತೀಯ ಜಾನಪದ ಅಧ್ಯಯನಕ್ಕೆ ವಿಶೇಷ ಕೊಡುಗೆ ನೀಡಿದ ಪ್ರೊ. ಜವಾಹರಲಾಲ್ ಹಂಡೂ ಅವರನ್ನು ಅಭಿನಂದಿಸಲಾಯಿತು. ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ರಾಜ್ಯಸಭಾ ಸದಸ್ಯ ಶ್ರೀ ಸೀತಾರಾಮ ಯೆಚೂರಿ ಅವರು ಜಾನಪದ ವಿದ್ವಾಂಸರೊಡನೆ ಉಪಯುಕ್ತ ಸಂವಾದ ನಡೆಸಿದರು.

ಉದ್ಘಾಟನಾ ಭಾಷಣ ಮಾಡಿದ ಪ್ರೊ. ಸುದರ್ಶನ ರಾವ್ ಅವರು ಭಾರತೀಯ ಜಾನಪದದ ಮೂಲವನ್ನು ವೇದಕಾಲಕ್ಕೆ ಕೊಂಡೊಯ್ದು, ಹೇಗೆ ವೇದಗಳು ಮೌಖಿಕವಾಗಿ ಪಸರಿಸಿಕೊಂಡು ಬಂದುವು ಎಂಬುದನ್ನು ಸಾಧಾರವಾಗಿ ವಿವರಿಸಿದರು. ಇದೇ ರೀತಿ ಭಾರತೀಯ ಸಂಸ್ಕೃತಿಯ ಉದಾತ್ತ ಮೌಲ್ಯಗಳು ತಲೆಮಾರಿನಿಂದ ತಲೆಮಾರಿಗೆ ಕಂಠಸ್ಥ ಪರಂಪರೆಯಲ್ಲಿಯೇ ಉಳಿದು ಬಂದಿರುವುದನ್ನು ಒಪ್ಪಿಕೊಂಡ ಅವರು, ಆಧುನಿಕತೆಯ ಹೊಡೆತಕ್ಕೆ ಸಿಕ್ಕಿ ಅವೆಲ್ಲ ಇಂದು ನಾಶವಾಗುತ್ತಿರುವುದರಿಂದಾಗಿ ಅವನ್ನು ದಾಖಲಿಸುವ ಅಗತ್ಯ ಆಗಲೇಬೇಕೆಂದು ಅಭಿಪ್ರಾಯ ಪಟ್ಟರು. ಅಲ್ಲದೆ ಇಂಥ ಕೆಲಸಗಳಿಗೆ ತಾವು ಪೂರ್ಣ ಬೆಂಬಲ ನೀಡುವುದಾಗಿ ಘೋಷಿಸಿದರು.

ದೇಶದ ವಿವಿದೆಡೆಗಳಿಂದ ಆಗಮಿಸಿದ ವಿದ್ವಾಂಸರ ಪ್ರೀತಿಪೂರ್ವಕ ಅಭಿನಂದನೆಯನ್ನು ಸ್ವೀಕರಿಸಿ ಭಾವಪೂರ್ಣವಾಗಿ ಮಾತಾಡಿದ ಹಿರಿಯ ಜಾನಪದ ವಿದ್ವಾಂಸ ಪ್ರೊ. ಜವಾಹರಲಾಲ್ ಅವರು ಈ ಸಂದರ್ಭದಲ್ಲಿ ಮಾತಾಡುತ್ತಾ 'ಭಾರತದಲ್ಲಿ ಜಾನಪದವು ನಿರ್ಲಕ್ಷಿತ ಸಮುದಾಯಗಳ ಸೊತ್ತು. ಈ ಸಮುದಾಯಗಳನ್ನು ನಾವು ಶತಮಾನಗಳಿಂದ ನಿರ್ಲಕ್ಷಿಸಿಕೊಂಡು ಬಂದಿದ್ದೇವೆ, ಆದರೆ ಈ ಜನ ದೇಶ ಕಟ್ಟಿದರು, ಭಾಷೆ ಬೆಳೆಸಿದರು, ನಮ್ಮ ಹೊಟ್ಟೆಗೆ ಅನ್ನ ಕೊಟ್ಟರು. ಅಂಥವರನ್ನು ಮುಖ್ಯ ವಾಹಿನಿಗೆ ತಾರದಿರುವುದು ನಾವು ಮಾಡಿದ ಘೋರ ಅಪರಾಧ. ಈಗಲಾದರೂ ನಾವು ಅವರ ಮೌಖಿಕ

### ಸೀತಾರಾಮ ಯೆಚೂರಿ ಅವರ ಉಪನ್ಯಾಸದಿಂದ




ನಾವು ಭೌಗೋಳಿಕವಾಗಿ ಹಾಗೂ ಭಾರತದ ನೆಲೆಯಲ್ಲಿ ಸಂಸ್ಕೃತಿ ಎಂಬುದರ ವ್ಯಾಖ್ಯೆಯನ್ನು ಅರ್ಥೈಸಬೇಕು. ಸಂಸ್ಕೃತಿ ಎನ್ನುವುದು ಕಲೆಯನ್ನು ವ್ಯಕ್ತಪಡಿಸುವ ಒಂದು ರೂಪ ಎನ್ನುತ್ತಾರೆ. ಆದರೆ ಇದೊಂದು ಬಹಳ ಸಂಕ್ಷಿಪ್ತವಾದ ಅರ್ಥ ಬರುವ ವ್ಯಾಖ್ಯೆ. ಸಂಸ್ಕೃತಿಯಲ್ಲಿ ಜಾನಪದವೂ ಬರುತ್ತದೆ. ಆಗ ಅದರ ಅರ್ಥ ವಿಶಾಲವಾಗುತ್ತದೆ. ನಂತರ ಜಂಗಮರೂಪೀ ಜಾನಪದ ಸಂಸ್ಕೃತಿಯ ಕುರಿತು ಜಾಗತಿಕ ಮಟ್ಟದಲ್ಲಿ ವಿವರಣೆಗಳು ಬರತೊಡಗಿದವು. ಅದಕ್ಕೆ ಮುಖ್ಯವಾಗಿ ಪ್ರತಿದೇಶದ ಮೂಲ

















ನಿರೂಪಣೆಗಳನ್ನು ದಾಖಲಿಸಿ, ಸಂರಕ್ಷಿಸಿ, ಅವುಗಳ ಬಗ್ಗೆ ಚರ್ಚಿಸಿ, ನಮ್ಮ ಮಾನವೀಯತೆಯನ್ನು ಮರೆಯಬೇಕಾಗಿದೆ. ನಾವು ಅಮಾನುಷರಾಗಿದ್ದುದು ಸಾಕು, ಇನ್ನಾದರೂ ಮನುಷ್ಯರಾಗೋಣ' ಎಂದು ಗದ್ಗದಿತರಾಗಿ ನುಡಿದರು.

ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ ದೆಹಲಿ ತಮಿಳು ಸಂಘಂನ ಅಧ್ಯಕ್ಷರಾದ ಶ್ರೀ ವಿ. ಬಾಲಸುಬ್ರಹ್ಮಣ್ಯನ್ ಮತ್ತು ದೆಹಲಿ ಆಂಧ್ರ ಅಸೋಸಿಯೇಶನ್‌ನ ಶ್ರೀ ಮಣಿ ನಾಯ್ಡು ಅವರೂ ಮಾತಾಡಿ 'ದೆಹಲಿ ಕರ್ನಾಟಕ ಸಂಘ ನಮ್ಮೆಲ್ಲರನ್ನೂ ಒಂದು ವೇದಿಕೆಗೆ ತಂದು ದೊಡ್ಡ ಕೆಲಸ ಮಾಡಿದೆ. ನಾವೆಲ್ಲ ಆಗಾಗ ಹೀಗೆ ಸೇರಬೇಕಾದ ಅಗತ್ಯವಿದೆ' ಎಂದು ಸಂಘದ ಕೆಲಸವನ್ನು ಶ್ಲಾಘಿಸಿದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡಿ ಕೇಂದ್ರ ಜಾನಪದ ಅಕಾಡೆಮಿಯ ಸ್ಥಾಪನೆಗೆ ಸಂಘವು ಸಂಪೂರ್ಣ ಬೆಂಬಲವನ್ನು ನೀಡುವುದು ಎಂದರು. ದ್ರಾವಿಡ ಭಾಷೆಗಳಲ್ಲಿ ಒಂದಾದ ತುಳು ಭಾಷೆಗೆ ಇನ್ನೂ ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಮಾನ್ಯತೆ ದೊರಕದಿರುವುದು ವಿಷಾದನೀಯವೆಂದ ಅವರು ಈ ನಿಟ್ಟಿನಲ್ಲಿ ಎಲ್ಲರೂ ಜತೆಯಾಗಿ ಕೆಲಸ ಮಾಡಬೇಕು ಎಂದರು.

ಉದ್ಘಾಟನಾ ಸಮಾರಂಭದ ನಂತರ ದಕ್ಷಿಣ ಭಾರತದ ಪಂಚ ದ್ರಾವಿಡ ಭಾಷೆಗಳಾದ ಕನ್ನಡ, ತಮಿಳು, ತುಳು, ತೆಲುಗು, ಮಲಯಾಳಂಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನವು ನಡೆಯಿತು. ತಾಮರ ನೃತ್ಯ ಕೇಂದ್ರದ ಕಲಾವಿದರು ಶ್ರುತಿ ಕೆ.ಪಿ. ಅವರ ನೇತೃತ್ವದಲ್ಲಿ ಕನ್ನಡ ಜಾನಪದ ನೃತ್ಯಗಳನ್ನು ಮಾಡಿದರು. ತಮಿಳ್‌ನಲ್ಲಿ ಶ್ರುತಿ ಅಶೋಕನ್ ಅವರಿಂದ ಶಿವ ತಾಂಡವ ಮತ್ತು ಉರಗನೃತ್ಯಗಳ ಪ್ರದರ್ಶನವಾಯಿತು. ದೆಹಲಿಯ ವಂದನಾ ಶೆಟ್ಟಿ ಮತ್ತು ತಂಡದವರು ತುಳು ಹಾಡಿಗೆ ಜಾನಪದ ನೃತ್ಯ ಮಾಡಿದರು. ತೆಲುಗಿನಲ್ಲಿ ಡಾ. ಮೋಹಿನಿ ಗಿರಿ ಅವರ ಶಿಷ್ಯೆಯರಿಂದ ಅಣ್ಣಮಾಚಾರ್ಯ ಕೀರ್ತನೆಗಳಿಗೆ ಆಂಧ್ರ ಶೈಲಿಯ ನೃತ್ಯ ನಡೆಯಿತು. ಮಲಯಾಳದಲ್ಲಿ ಖ್ಯಾತ ಸಂಗೀತಕಾರ ತಿರುವಾಂಕೂರಿನ ಯುವರಾಜ ಸ್ವಾತಿ ತಿರುನಾಳ್ ಅವರಿಗೆ ಇರವಿ ವರ್ಮನ್ ತಂಬಿ ಅವರು ಸಂಯೋಜಿಸಿದ್ದ ಜೋಗುಳ ಪದಕ್ಕೆ ನಿಶಾ ರಾಣಿ ಅವರ ನೃತ್ಯ ಸಂಯೋಜನೆಯಲ್ಲಿ ರೇಶ್ಮಾ ಸುರೇಶ್ ಅವರು ನೃತ್ಯ ಮಾಡಿದರು.

ಮೂರು ದಿನಗಳ ಕಾಲ ನಡೆದ ಈ ವಿಚಾರ ಸಂಕಿರಣದಲ್ಲಿ ಕಲ್ಲಿಕೋಟೆ ವಿಶ್ವವಿದ್ಯಾಲಯದ ಪ್ರೊ. ರಾಘವನ್ ಪಯ್ಯನಾಡ್ ಅವರು ಭಾರತೀಯ ಜಾನಪದದ ಸರ್ವೇಕ್ಷಣೆಯ ಅಗತ್ಯದ ಕುರಿತು ಪ್ರಬಂಧ ಮಂಡಿಸಿದರು. ಉಳಿದಂತೆ ಪಾಂಡಿಚೇರಿ ವಿಶ್ವವಿದ್ಯಾಲಯದ ಡಾ. ಚೆಲ್ಲಪೆರುಮಾಳ್ ಅವರು ಸಾಂಪ್ರದಾಯಿಕ ಕುಶಲ ಕರ್ಮಗಳ ಕುರಿತು, ವಾರಂಗಲ್ ವಿಶ್ವವಿದ್ಯಾಲಯದ ಡಾ. ಭಕ್ತವತ್ಸಲ ರೆಡ್ಡಿ ಅವರು ಜಾನಪದ ಆಹಾರ ಪದ್ಧತಿಯ ಕುರಿತು, ದೆಹಲಿಯ ಅಮೇರಿಕನ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್‌ನ ಉಪ ಡೈರೆಕ್ಟರ್ ಜನರಲ್ ಡಾ. ಶುಭಾ ಚೌಧುರಿ ಅವರು ಜಾನಪದ ದಾಖಲಾತಿ ಕೇಂದ್ರದ ಅಗತ್ಯ ಮತ್ತು ಮಹತ್ವದ ಕುರಿತು, ಶಿಲ್ಲಾಂಗ್‌ನ ನೈರುತ್ಯ ವಿಶ್ವವಿದ್ಯಾಲಯದ ಡಾ. ಸೈಮನ್ ಜೋನ್

ಸಂಸ್ಕೃತಿಯೇ ಕಾರಣ. ಭಾರತದಲ್ಲಿ ಇದನ್ನು ನಾವು ಬುಡಕಟ್ಟು ಸಮುದಾಯಗಳ ಕಲೆ ಮತ್ತು ಸಂಸ್ಕೃತಿ ಎನ್ನುತ್ತೇವೆ. ನಿಜವಾಗಿ ಅದು ಅವರು ತಮ್ಮ ಕಲೆಯನ್ನು ವ್ಯಕ್ತಪಡಿಸುವ ವಿಧಾನವಾಗಿದೆ. ಅದನ್ನೇ ಈಗ ಇಂಟೇಂಜಿಬಲ್ ಸಾಂಸ್ಕೃತಿಕ ಪರಂಪರೆಯೆನ್ನುತ್ತೇವೆ.

ಆದರೆ ನನ್ನ ಪ್ರಕಾರ ಸಂಸ್ಕೃತಿ ಎನ್ನುವುದು ಇವೆಲ್ಲಕ್ಕಿಂತ ಹೆಚ್ಚಿನದು ಎನ್ನುವುದು. ಪ್ರತಿ ಭಾಷೆಯಲ್ಲೂ ಒಬ್ಬ ವ್ಯಕ್ತಿಯನ್ನು ಸೂಚಿಸಲು ಅವನೊಬ್ಬ ಸುಸಂಸ್ಕೃತ ವ್ಯಕ್ತಿ ಎನ್ನುತ್ತಾರೆ. ಸುಸಂಸ್ಕೃತ ವ್ಯಕ್ತಿ ಎಂದರೆ ಯಾರು – ಆತ ಪ್ರಖ್ಯಾತ ಸಂಗೀತಗಾರನಲ್ಲ, ಚಿತ್ರ ಕಲಾವಿದನಲ್ಲ, ಅವನಿಗೆ ಲಲಿತ ಕಲೆಯ ಬಗ್ಗೆಯಾಗಲೀ, ಜಾನಪದ ಕಲೆಯ ಬಗ್ಗೆಯಾಗಲೀ ಏನೂ ತಿಳಿದಿರಬಹುದು. ಆದರು ನಾವು ವ್ಯಕ್ತಿಯನ್ನು ಸುಸಂಸ್ಕೃತ ವ್ಯಕ್ತಿ ಎನ್ನುತ್ತೇವೆ. ಅದು ಅವನ ನಡತೆಯನ್ನು ಸೂಚಿಸುತ್ತದೆ. ಅವನ ಜೀವನ ಶೈಲಿ ಮತ್ತು ಆತನು ವ್ಯಕ್ತಪಡಿಸುವ ಭಾವನೆಗಳು. ಅದು ಕೂಡಾ ಸಂಸ್ಕೃತಿ. ಹಾಗಾಗಿ ಸಂಸ್ಕೃತಿ ಎನ್ನುವುದು ಎಲ್ಲಕ್ಕಿಂತ ವಿಸ್ತಾರವಾದುದು. ನಾವು ಜಂಗಮರೂಪೀ ಸಾಂಸ್ಕೃತಿಕ ಪರಂಪರೆಯೆನ್ನುವಾಗ ನನ್ನ ಪ್ರಕಾರ ಅದು ಮಾನವನ ಸಮಗ್ರ ಗುಣಗಳು. ನಾವು ಹೇಗೆ ನಡೆದುಕೊಳ್ಳುತ್ತೇವೆ, ಹೇಗೆ ನಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತೇವೆ ಎನ್ನುವುದೇ ಸಂಸ್ಕೃತಿಯಾಗುತ್ತದೆ.

ಈಗ ನೀವು ಕೇಳುತ್ತಿರುವ ಕೇಂದ್ರ ಜಾನಪದ ಅಕಾಡೆಮಿ ಅಗತ್ಯವಾಗಿ ಆಗಬೇಕಾದ ಕೆಲಸ. ಆದರೆ ಈ ಬೇಡಿಕೆ ಒಂದು ಜನಾಂದೋಲನವಾಗಬೇಕು, ಆಗ ಮಾತ್ರ ಅದು ಸರಕಾರದ ಕಿವಿಗೆ ಬೀಳುತ್ತದೆ. ಇದೊಂದು ಜನಪರವಾದ ಕೆಲಸವಾದ್ದರಿಂದ ನಿಮ್ಮ ಜೊತೆಗೆ ನಾನು ಕೆಲಸ ಮಾಡಲು ಸಿದ್ಧ, ಅದರ ಬಗ್ಗೆ ಬೇಕಾದ ಸ್ಥಳಗಳಲ್ಲಿ ಅಗತ್ಯವಾಗಿ ಮಾತಾಡುತ್ತೇನೆ.












ಅವರು ಜಾನಪದ ಪರಂಪರೆಯ ಸಂರಕ್ಷಣೆಯ ಕುರಿತು, ನಾಗಲ್ಯಾಂಡಿನ ಡಾ. ಡೆಸ್ಮಂಡ್ ಅವರು ಸಂರಕ್ಷಿಸಿದ ಜಾನಪದ ಮಾಹಿತಿಗಳ ಉಪಯೋಗದ ಕುರಿತು, ದೆಹಲಿ ವಿಶ್ವವಿದ್ಯಾಲಯದ ಡಾ. ಟಿ.ಎಸ್. ಸತ್ಯನಾಥ್ ಅವರು ಸಾಂಸ್ಕೃತಿಕ ಪರಂಪರೆಗಳ ಪುನಶ್ಚೇತನದ ಕುರಿತು, ಮುಂಬೈ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಪ್ರಕಾಶ್ ಅವರು ರಂಗಕಲೆಗಳ ಕುರಿತು, ದೆಹಲಿಯ ಜವಾಹರಲಾಲ್ ವಿಶ್ವವಿದ್ಯಾಲಯದ ಅಂತಾರಾಷ್ಟ್ರೀಯ ಕಾನೂನು ಪ್ರೊಫೆಸರ್ ಡಾ. ವೆಂಕಟಾಚಲ ಜಿ. ಹೆಗಡೆ ಅವರು ಜಾನಪದ ನಿರೂಪಕರ ಬೌದ್ಧಿಕ ಹಕ್ಕುಗಳ ಕುರಿತು ಅತ್ಯಂತ ಉಪಯುಕ್ತವಾದ ಮಾಹಿತಿಗಳನ್ನು ನೀಡಿದರು.

ಕುಪ್ಪಂನ ದ್ರಾವಿಡ ವಿಶ್ವವಿದ್ಯಾಲಯದ ಅಸಿಸ್ಟೆಂಟ್ ಪ್ರೊಫೆಸರ್ ಡಾ. ಎಂ.ಎನ್. ವೆಂಕಟೇಶ್, ಲೋಕಸಭೆಯ ಕನ್ನಡ ಭಾಷಾಂತರಕಾರ ಶ್ರೀ ಎನ್. ಪಿ ಚಂದ್ರಶೇಖರ್, ಗುರಗಾಂವ್‌ನ ಕಾರ್ಪೋರೇಟ್ ಸಸ್ಟೈನೆಬಿಲಿಟಿ ಸಂಸ್ಥೆಯ ಪ್ರಾಧ್ಯಾಪಕ ಡಾ. ಸಖಾರಾಮ ಸೋಮಯಾಜಿ ಅವರು ವಿವಿಧ ಹಂತದಲ್ಲಿ ಕಾರ್ಯಕ್ರಮಗಳನ್ನು ನಿರೂಪಿಸಿದರು. ಸಂಕಿರಣದ ಕೊನೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಎಚ್.ಎಂ. ಮಹೇಶ್ವರಯ್ಯ ಅವರ ಅಧ್ಯಕ್ಷತೆಯಲ್ಲಿ ಮುಂದಿನ ಕಾರ್ಯ ಯೋಜನೆಗಳನ್ನು ರೂಪಿಸಲಾಯಿತು. ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದ ಶ್ರೀ ಗೌರಬ್ ಘೋಷ್ ಕಾರ್ಯಕ್ರಮ ನಿರ್ವಹಿಸಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ವೈಸ್ ಚಾನ್ಸಲರ್ ಪ್ರೊ. ಹೆಚ್.ಸಿ. ಬೋರಲಿಂಗಯ್ಯ ಅವರು ವಿಚಾರ ಸಂಕಿರಣದ ಸಮಾರೋಪ ಭಾಷಣ ಮಾಡಿ 'ಭಾರತದ ನಿಜವಾದ ಸಂಸ್ಕೃತಿ ನಿಂತಿರುವುದು ಅದರ ಜಾನಪದದಲ್ಲಿ. ಅದನ್ನು ದಾಖಲಿಸಿ, ಸಂರಕ್ಷಿಸದೇ ಹೋದರೆ ನಮಗೆ ಭಾರತ ಅರ್ಥವಾಗಲಾರದು. ಜೊತೆಗೆ ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಜಾನಪದ ಒಂದು ಬಗೆಯ ಅಪಾಯಕ್ಕೂ ಗುರಿಯಾಗುತ್ತಲಿದೆ. ಇಂಥ ಸಂದರ್ಭದಲ್ಲಿ ಈ ಬಗೆಯ ಕೆಲಸಗಳು ಅಗತ್ಯವಾಗಿ ಆಗಬೇಕಾಗಿದೆ ಎಂದರಲ್ಲದೆ ಕೇಂದ್ರದಲ್ಲಿ ಜಾನಪದ ಅಕಾಡೆಮಿಯ

## "ಜಾನಪದ ಕಲೆಗಳ ದಾಖಲೀಕರಣ ಆ ಕಲೆಯ ಪುನರುಜ್ಜೀವನಕ್ಕೆ ಅನುವು ಮಾಡಬೇಕು"

**ಡಾ. ಬಿ.ಎ. ವಿವೇಕ ರೈ**




**ವಿಶ್ರಾಂತ ಕುಲಪತಿ, ಹಿರಿಯ ವಿದ್ವಾಂಸ ಡಾ. ಬಿ.ಎ. ವಿವೇಕ ರೈ ಅವರು ವಿಚಾರ ಸಂಕಿರಣ ಉದ್ಘಾಟನಾ ಸಮಾರಂಭದಲ್ಲಿ ಮಾಡಿದ ಉಪನ್ಯಾಸದ ಆಯ್ದ ಭಾಗ.**

ಭಾರತ ದೇಶದ ರಾಜಧಾನಿಯಲ್ಲಿ ಜಾನಪದದ ಕುರಿತೊಂದು ರಾಷ್ಟ್ರೀಯ ವಿಚಾರ ಸಂಕಿರಣ ನಡೆಯುತ್ತಿದೆ. ದೆಹಲಿಯಲ್ಲಿ ಕೇಂದ್ರೀಯ ಸಾಹಿತ್ಯ ಅಕಾಡೆಮಿ, ನೃತ್ಯ ಕಲಾ ಅಕಾಡೆಮಿಗಳಿವೆ, ಆದರೆ ಭಾರತದ ಜಾನಪದಕ್ಕೊಂದು ಅಕಾಡೆಮಿ ಇಲ್ಲ. ನ್ಯಾಶನಲ್ ಆರ್ಕೈವ್ ಇದೆ, ನ್ಯಾಶನಲ್ ಸ್ಕೂಲ್ ಆಫ್ ಡ್ರಾಮಾ ಇದೆ, ಆದರೆ ಜಾನಪದಕ್ಕಾಗಿ ಒಂದು ನ್ಯಾಶನಲ್ ಆರ್ಕೈವ್ ಇಲ್ಲ. ಜಾನಪದ ರಂಗ ತರಬೇತಿಗೆ ಒಂದು ಶಾಲೆ ಇಲ್ಲ.

ಜವಾಹರಲಾಲ್ ಹಂಡೂ ಅವರ ಜತೆಗೆ ಸೇರಿ ನಾವು ಹಲವಾರು ಜಾನಪದ ವಿಚಾರ ಸಂಕಿರಣ, ಅಧ್ಯಯನ ಮತ್ತು ತರಬೇತಿ ಶಿಬಿರಗಳನ್ನು ಮಾಡಿದ್ದೇವೆ. ದಕ್ಷಿಣ ಭಾರತೀಯ ಭಾಷೆಗಳ ಜಾನಪದ ಸಂಸ್ಥೆ ಕೂಡಾ ಇಂತಹ ಹಲವಾರು ಕಾರ್ಯಕ್ರಮಗಳನ್ನು ಮಾಡಿದೆ. ಚೆನ್ನೈ, ಉಡುಪಿಗಳಲ್ಲಿ ಜಾನಪದ ಆರ್ಕೈವ್‌ಗಳ ಸ್ಥಾಪನೆಯಾಗಿದೆ.

ಜಾನಪದದ ಕುರಿತು ರಾಜಕಾರಣಿಗಳು, ವಿದ್ವಾಂಸರು ಮತ್ತು ಅದರಲ್ಲಿ ಆಸಕ್ತಿ ಇರುವವರು ಮಾತಾಡುತ್ತಾರೆ. ಆದರೆ ಸರಕಾರದಿಂದ ಈ ವರೆಗೂ ಯಾವುದೇ ಕೆಲಸಗಳು ಆಗಿಲ್ಲ. ಯಾವುದಾದರೂ ನಿಯಮಿತವಾಗಿ ಸಣ್ಣಮಟ್ಟದಲ್ಲಿ ನಡೆದರೆ ಅದು ಜಾನಪದದ ಸರಕಾರೇತರ ಸಂಸ್ಥೆಗಳಿಂದ.

ಯುನೆಸ್ಕೋ ಸಂಸ್ಥೆಯು 2003ರಲ್ಲಿ ಅಮೂರ್ತವಾದ ಸಾಂಸ್ಕೃತಿಕ ಪರಂಪರೆಯ ದಾಖಲೀಕರಣ, ಸಂಸ್ಕರಣೆ ಮತ್ತು ಪೋಷಣೆಯ ನಿರ್ಣಯ ತೆಗೆದುಕೊಂಡಾಗ ಭಾರತವೂ ಅದರಲ್ಲಿ ಭಾಗಿಯಾಗಿತ್ತು. ದೆಹಲಿಯಲ್ಲಿರುವ ಸರಕಾರದ ಅಧಿಕಾರಿಗಳನ್ನು ಮೂರ್ತ ಮತ್ತು ಅಮೂರ್ತ ಸಾಂಸ್ಕೃತಿಕ ಪರಂಪರೆಯ ಕುರಿತು ವಿಚಾರಿಸಿದರೆ ಅವರಿಗೆ ಅದರ ನಡುವಿನ ಭಿನ್ನತೆಯ ಬಗ್ಗೆ ಅರಿವಾಗದು. ಈ ಸಭೆಯ ಪ್ರೇಕ್ಷಕರಲ್ಲಿ ಜಾನಪದದ ಕುರಿತು ಅಧ್ಯಯನ ಮಾಡಿ ಅದನ್ನು ಸಂಗ್ರಹಿಸಿದವರು ಇದ್ದಾರೆ. ಅದನ್ನು ರೂಪಾಂತರಿಸಿದ್ದಾರೆ, ಡಿಜಿಟೈಜೇಶನ್ ಮಾಡಿದ್ದಾರೆ. ಅದು ಟಿಪ್ಪಣಿಗಳು, ಆಡಿಯೋ, ಛಾಯಾಗ್ರಹಣ ಮತ್ತು ವಿಡಿಯೋಗಳಿಂದ ಕೂಡಿದ ಮಲ್ಟಿಮೀಡಿಯಾ ದಾಖಲೀಕರಣವೆಂದು ಕರೆಯಲಾಯಿತು. ಆದರೆ ಇವೆಲ್ಲ ವೈಯಕ್ತಿಕ ಅಥವಾ ಸಣ್ಣ ಸಂಸ್ಥೆಗಳ ಪ್ರಯತ್ನವಾಗಿದೆ.

ಜನರ ಭಾಷಾವಾರು ಸಮೀಕ್ಷೆ ಯೊಂದನ್ನು















ಅಗತ್ಯದ ಕುರಿತೂ ಮಾತಾಡಿದರು.
ತಮ್ಮ ಭಾಷಣದ ಕೊನೆಯಲ್ಲಿ ಅವರು ಈ ವಿಚಾರ ಸಂಕಿರಣದ ಮುಂದಿನ ಭಾಗವನ್ನು ಕನ್ನಡ ವಿಶ್ವ ವಿದ್ಯಾಲಯದಲ್ಲಿ ನಡೆಸುವುದಾದರೆ ಅದಕ್ಕೆ ಎಲ್ಲ ಬಗೆಯ ಬೆಂಬಲ ನೀಡುವುದಾಗಿ ಭರವಸೆ ನೀಡಿದರು. ಸಮಾರೋಪ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಡಾ. ಜವಾಹರಲಾಲ ಹಂಡೂ ಅವರು ಕೇಂದ್ರ ಜಾನಪದ ಅಕಾಡೆಮಿಯ ಸ್ಥಾಪನೆ ಅಗತ್ಯವಾಗಿ ಆಗಬೇಕಾಗಿದೆ, ಅದಕ್ಕೆ ಬೇಕಾದ ಪ್ರಸ್ತಾವನೆಯನ್ನು ಸಿದ್ಧನಾಗಿದ್ದೇನೆ ಎಂದು ಹೇಳಿದರು. ದೆಹಲಿಯ ಅಕಾಡೆಮಿ ಆಫ್ ತೆಂಕು ತಿಟ್ಟಿನ ನಿರ್ದೇಶಕರಾದ ಶ್ರೀ ಎಸ್. ಕೃಷ್ಣ ಭಟ್ ಅವರು ಕಾರ್ಯಕ್ರಮ ನಿರ್ವಹಿಸಿ, ವಂದಿಸಿದರು.

ಅಮೇರಿಕನ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್‌ನ ನಿರ್ದೇಶಕ ಮತ್ತು ಜಾನಪದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ, ದೆಹಲಿ ವಿಶ್ವವಿದ್ಯಾನಿಲಯದ ನಿವೃತ್ತ ಕನ್ನಡ ಪ್ರೊಫೆಸರ್ ಡಾ. ಟಿ.ಎಸ್. ಸತ್ಯನಾಥ್ ಮತ್ತು ಸೆಂಟ್ರಲ್ ಸೆಕ್ರೆಟೇರಿಯೇಟ್ ಗ್ರಂಥಾಲಯದ ಮುಖ್ಯ ಗ್ರಂಥಪಾಲಕ ಡಾ. ವೈ. ಅವನೀಂದ್ರನಾಥ್ ರಾವ್ ಅವರು ಮೂರು ದಿನಗಳ ಕಾಲದ ವಿಚಾರ ಸಂಕಿರಣದ ಕಾರ್ಯ ಸಂಯೋಜಕರಾಗಿದ್ದರು.

ಈ ಉಪಯುಕ್ತ ಕಾರ್ಯಕ್ರಮಕ್ಕೆ ದೆಹಲಿಯ ಭಾರತೀಯ ಇತಿಹಾಸ ಸಂಶೋಧನಾ ಮಂಡಳಿ, ಹಂಪಿಯ ಕನ್ನಡ ವಿಶ್ವ ವಿದ್ಯಾಲಯ, ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ದೆಹಲಿ ತಮಿಳು ಸಂಘಂ, ದೆಹಲಿ ಮಲೆಯಾಳೀ ಅಸೋಸಿಯೇಷನ್, ಆಂಧ್ರ ಅಸೋಸಿಯೇಷನ್, ದೆಹಲಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮತ್ತು ದೆಹಲಿ ತುಳು ಸಿರಿಯು ಸಹಾಯ ನೀಡಿತ್ತು. ಅ

*ಡಾ. ಪುರುಷೋತ್ತಮ ಬಿಳಿಮಲೆ ಮತ್ತು ಬಾಲಕೃಷ್ಣ ನಾಯ್ಕ್ ಡಿ.*

ಜಿ.ಎನ್. ದೇವಿ ಅವರು ಮಾಡಿದರು. ಅಂತಹ ಸಮೀಕ್ಷೆಯನ್ನು ಮಾಡಬಹುದಾದರೆ ಜಾನಪದ ಸಮೀಕ್ಷೆಯನ್ನು ಮಾಡುವುದಕ್ಕೆ ಏನು ತೊಂದರೆ? ಸರಕಾರವು ಅನುದಾನವನ್ನು ನೀಡಿ ಕೇವಲ ಸಂವಿಧಾನದಲ್ಲಿ ಅಂಗೀಕೃತವಾದ 22 ಭಾಷೆಗಳಿಗಲ್ಲದೇ, ನೈಋತ್ಯ ರಾಜ್ಯಗಳ ಮತ್ತು ದಕ್ಷಿಣ ಭಾರತದಲ್ಲಿ ಜಾನಪದೀಯವಾಗಿ ಶ್ರೀಮಂತವಾಗಿರುವ ಹಲವಾರು ಭಾಷೆಗಳಲ್ಲಿ ಅದನ್ನು ಮಾಡಬೇಕಾಗಿದೆ. ಈ ಎಲ್ಲಾ ಕಡೆಯೂ ಸಣ್ಣ ಮಟ್ಟದಲ್ಲಿ ಕೆಲಸಗಳು ನಡೆದರು ಅದನ್ನು ಎಲ್ಲರೂ ಒಂದು ಕೊಂಡಿಯಾಗಿ ಬಳಸಿ ಒಬ್ಬರಿಗೊಬ್ಬರು ಹಂಚಲು ಆಗಲಿಲ್ಲ. ಈ ತರ ಆಗಲು ಅದಕ್ಕೊಂದು ದೂರದೃಷ್ಟಿಯ ಸುಸಜ್ಜಿತ ಯೋಜನೆಯೊಂದು ಬೇಕಾಗುತ್ತದೆ. ಈ ವಿಚಾರಸಂಕಿರಣವು ಕೇವಲ ಶೈಕ್ಷಣಿಕ ಚಿಂತನೆಯನ್ನು ಮಾಡದೇ ರಾಜಕೀಯ ಚಿಂತನೆಯನ್ನೂ ಮಾಡ ಬೇಕು. ಪ್ರಾದೇಶಿಕ ಭಾಷೆಯ ಸಂಸ್ಕೃತಿ, ಜಾನಪದದ ಕುರಿತು ನಾವು ಕೇವಲ ಮಾತಾಡುತ್ತೇವೆ ಆದರೆ ಮಾತಿನಾಚೆ ಅದು ಮುಂದುವರಿಯುವುದಿಲ್ಲ. ಈ ನಿಟ್ಟಿನಲ್ಲಿ ನಮಗೆ ಇದೊಂದು ಮಹತ್ವದ ವೇದಿಕೆಯಾಗಿದೆ. ಈ ಮೂರು ದಿನಗಳಲ್ಲಿ ಒಂದು ನಿಶ್ಚಿತವಾದ ಕರಡುಪ್ರತಿಯನ್ನು ತಯಾರಿಸಿ ಇಂತಹ ಒಂದು ಚಟುವಟಿಕೆಯನ್ನು ಕೇಂದ್ರಮಟ್ಟದಲ್ಲಿ ಎತ್ತಿಕೊಳ್ಳಲು ಒತ್ತಾಯಿಸಬೇಕು.

ಇದು ಕೇವಲ ಹಣದ ಕೊರತೆಯಿಂದ ಆಗದಿರುವುದಲ್ಲ. ಬದಲು ನಮಗೆ ಇಂತಹ ಕೆಲಸ ಮಾಡಲು ಉತ್ಸುಕ ಮನಸ್ಸುಗಳೂ ಬೇಕಾಗಿವೆ. ಯುವಜನಾಂಗವು ಸಂಸ್ಕೃತಿ ಬಗ್ಗೆ ಸೆಮಿನಾರ್‌ಗಳಲ್ಲಿ ಮಾತಾಡುತ್ತಾರೆ. ಆದರೆ ಕ್ಷೇತ್ರ ಅಧ್ಯಯನ ಕೈಗೊಳ್ಳಲು ಅವರು ಹೋಗುತ್ತಿಲ್ಲ. ನಾನು ಮಂಗಳೂರಿನಲ್ಲಿ ನಾಲ್ಕು ತಿಂಗಳಲ್ಲಿ ಎಪ್ಪತ್ತು ವಯಸ್ಸಿಗಿಂತ ಹಿರಿಯರಾದ ಸುಮಾರು 110 ಜನರನ್ನು ಭೇಟಿಯಾಗಿ ಅವರಿಂದ ಮಂಗಳೂರು ನಗರದ ಮೌಖಿಕ ಇತಿಹಾಸವನ್ನು ಕೇಳಿದೆ. ಅವರು ನೀಡಿದ ವಿಷಯಗಳು ಯಾವುದೇ ಗಜೆಟೀಯರ್‌ನಲ್ಲಾಗಲೀ ಇನ್ನಿತರ ದಾಖಲೆಗಳಲ್ಲಾಗಲೀ ಇರಲಿಲ್ಲ. ಆದರೆ ನಾನು ಇಂತಹ ಕೆಲಸಗಳಿಗೆ ಯುವಕರನ್ನು ಕೇಳಿದರೆ ಅವರು ತಮಗೆ ಆಫೀಸಿನ ಒಳಗಡೆ ಕುಳಿತು ಮಾಡುವ ಕೆಲಸಬೇಕು. ಹೊರಗೆ ಹೋಗಿ ಕ್ಷೇತ್ರ ಸಂದರ್ಶನ ಮಾಡಿ ವಿಷಯ ಸಂಗ್ರಹಿಸಲು ನಮ್ಮಿಂದಾಗದು ಎಂದು ಹೇಳಿದರು. ಹಿಂದಿನಂತೆ ದಾಖಲೀಕರಣವು ಕಷ್ಟವಲ್ಲ. ಡಿಜಿಟಲ್ ಯುಗದಲ್ಲಿ ಸಣ್ಣ ಸಣ್ಣ ಉಪಕರಣಗಳ ಮೂಲಕ ದಾಖಲೀಕರಣ ನಡೆಸಬಹುದು. ಹಾಗಾಗಿ ಅವರಿಗೆ ಸರಿಯಾದ ತರಬೇತಿಯ ಅವಶ್ಯಕತೆಯಿದೆ.

ಈ ವಿಚಾರ ಸಂಕಿರಣದಲ್ಲಿ ಸಾಂಸ್ಕೃತಿಕ ಪರಂಪರೆಯ ದಾಖಲೀಕರಣ, ಸಂರಕ್ಷಣೆ ಮತ್ತು ಪೋಷಣೆಯ ಕುರಿತಾದ ಹೊಸ ವ್ಯಾಖ್ಯಾನವನ್ನು ನಾವು ಹುಡುಕಬೇಕಾಗಿದೆ. ಯಾಕೆಂದರೆ ಈಗ ನಾವು ಮಾಡುವುದೇನೆಂದರೆ ಕ್ಷೇತ್ರಗಳಿಗೆ ಹೋಗಿ ವಿಷಯ ಸಂಗ್ರಹಿಸಿ ಅದನ್ನು ದಾಖಲೀಕರಣ ಮಾಡುವುದು. ಕಳೆದ ಸುಮಾರು ಇಪ್ಪತ್ತು ವರ್ಷಗಳಿಂದ ದಲಿತರು, ಬುಡಕಟ್ಟು ಮತ್ತು ಹಿಂದುಳಿದ ಸಮುದಾಯಗಳು ತಮ್ಮ ಸಂಸ್ಕೃತಿ ಬಗ್ಗೆ ಜಾಗೃತಿಗೊಂಡಿವೆ. ಜಾನಪದ ಕಲಾವಿದರು ತಮ್ಮ ಕಲೆಯನ್ನು ದಾಖಲೀಕರಣಕ್ಕೆ ಮಾರಲು ಒಪ್ಪುತ್ತಿಲ್ಲ. ಅವರ ಸಂಘಟನೆಗಳೂ ತಲೆ ಎತ್ತಿವೆ ಮತ್ತು ಕಲೆಗಳ ದಾಖಲೀಕರಣಕ್ಕೆ ಸಂಘಟನೆಗಳ ನಾಯಕರ ಒಪ್ಪಿಗೆ ಅಗತ್ಯ ಎನ್ನುತ್ತಾರೆ.

ಇಂಟೇಂಜಿಬಲ್ ಆದ ಜಾನಪದ ಕಲೆಗಳ ದಾಖಲೀಕರಣ ಕೇವಲ ಸಂಗ್ರಹಕ್ಕೆ ಅಥವಾ ಪ್ರಕಟಣೆಗೆ ಸೀಮಿತವಾಗಬಾರದು ಬದಲು ಅದು ಆ ಕಲೆಯ ಪುನರುಜ್ಜೀವನಕ್ಕೆ ಅನುವು ಮಾಡಿ ಕೊಡುವಂತಿರಬೇಕು. ಅಂದರೆ ಒಂದು ಕಲೆಯು ಅದನ್ನು ಮೂಲತಃ ಮಾಡುವವರಿಂದ ಪುನಶ್ಚೇತನಗೊಂಡು ಇತರರೂ ಅದನ್ನು ಅಭ್ಯಸಿಸುವಂತಿರಬೇಕು. ಆ ಕಲೆಯನ್ನು ಬೇರೆ ಬೇರೆ ಪ್ರಕಾರಗಳಿಗೆ ಉಪಯೋಗಿಸುವಂತಿರಬೇಕು. ಯಕ್ಷಗಾನ, ಕಥಕ್ಕಳಿ ಮತ್ತು ಕೂಡಿಯಾಟ್ಟಂನಂತಹ ಕಲೆಗಳನ್ನು ಈಗಾಗಲೇ ಪುನರುಜ್ಜೀವನಗೊಳಿಸಿ ವಿವಿಧ ಪ್ರಕಾರಗಳ ಮೂಲಕ ಸಾರ್ವಜನಿಕ ಪ್ರದರ್ಶನಕ್ಕೆ ಉಪಯೋಗಿಸುತ್ತಿದ್ದಾರೆ.

ಮೂರ್ತ ಮತ್ತು ಅಮೂರ್ತ ಸಾಂಸ್ಕೃತಿಕ ಪರಂಪರೆಗಳ ದ್ವಂದ್ವವನ್ನೂ ಈ ವಿಚಾರ ಸಂಕಿರಣ ಪರಿಹರಿಸಿಕೊಳ್ಳಬೇಕು. ಕಲೆಯ ಮೂರ್ತರೂಪದಲ್ಲಿ ಅದರ ವೇಷಭೂಷಣವಿರಬಹುದು ಆದರೆ ಅದರ ಅಮೂರ್ತ ರೂಪದಲ್ಲಿ ಅದರ ಕುರಿತು ಹಲವಾರು ಸಾಹಿತ್ಯಗಳಿರಬಹುದು. ಮೂರ್ತರೂಪಗಳ ಸಂಗ್ರಹವು ಮೌಖಿಕ ಅಥವಾ ಅಮೂರ್ತ ರೂಪದ ಜಾನಪದ ದಾಖಲೀಕರಣದೊಂದಿಗೆ ನಡೆದಾಗ ಮಾತ್ರ ಅದಕ್ಕೆ ಒಂದು ಅರ್ಥ ಬರುವುದು.

ಮೌಖಿಕ ಪರಂಪರೆಯ ದಾಖಲೀಕರಣವನ್ನು ಅಂತರ್ಜಾಲದಲ್ಲಿ ಡೈನಾಮಿಕ್ ವೆಬ್‌ಸೈಟ್‌ಗಳ ಮೂಲಕ ಹಂಚಿ ಪರಸ್ಪರ ಚರ್ಚಿಸುವಂತಾಗಬೇಕು. ಅ

*ಸಂಗ್ರಹಾನುವಾದ: ಬಾಲಕೃಷ್ಣ ನಾಯ್ಕ್ ಡಿ.*

# ದೆಹಲಿಯಲ್ಲಿ ಕೆಂಪೇಗೌಡ ಉತ್ಸವ

ಬೆಂಗಳೂರಿನ ವಿಶ್ವ ಒಕ್ಕಲಿಗರ ಮಹಾ ವೇದಿಕೆಯ ಆಶ್ರಯದಲ್ಲಿ ಬೆಂಗಳೂರು ನಗರದ ನಿರ್ಮಾತೃ ಕೆಂಪೇಗೌಡ ಅವರ ಕುರಿತು ವಿಚಾರ ಮಂಥನ, ಸಾಧಕರಿಗೆ ಸನ್ಮಾನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಸಂಭ್ರಮದೊಂದಿಗೆ ನಾಡಪ್ರಭು ಕೆಂಪೇಗೌಡರ ರಾಷ್ಟ್ರೀಯ ಉತ್ಸವವು ದೆಹಲಿ ಒಕ್ಕಲಿಗ ಗೌಡ ಸಂಘದ ಸಹಯೋಗದೊಂದಿಗೆ ದೇಶದ ರಾಜಧಾನಿ ನವದೆಹಲಿಯ ತಾಲ್‌ಕಟೋರ ಒಳಾಂಗಣ ಕ್ರೀಡಾಂಗಣದಲ್ಲಿ ಇದೇ ಡಿಸೆಂಬರ್ 13 ಮತ್ತು 14ರಂದು ನಡೆಯಿತು.

ಆದಿ ಚುಂಚನಗಿರಿ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರು ಉತ್ಸವವನ್ನು ವಿದ್ಯುಕ್ತವಾಗಿ ಉದ್ಘಾಟಿಸಿದರು. ಈ ಸಮಾರಂಭದಲ್ಲಿ ಉಡುಪಿ ಪೇಜಾವರ ಮಠದ ಶ್ರೀ ವಿಶ್ವೇಶ್ವರ ತೀರ್ಥ ಸ್ವಾಮೀಜಿ, ಗದಗಿನ ಡಂಬಳ ಮಠದ ತೋಂಟದ ಸಿದ್ದಲಿಂಗಸ್ವಾಮೀಜಿ ಮತ್ತು ಸ್ಫಟಿಕಾಪುರಿ ಮಹಾಸಂಸ್ಥಾನ ಮಠದ ನಂಜಾವಧೂತ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ಕೇಂದ್ರ ಕಾನೂನು ಸಚಿವ ಶ್ರೀ ಡಿ.ವಿ. ಸದಾನಂದ ಗೌಡ, ಕೇಂದ್ರ ಬೃಹತ್ ಉದ್ಯಮ ರಾಜ್ಯ ಸಚಿವರಾದ ಶ್ರೀ ಜಿ.ಎಂ. ಸಿದ್ದೇಶ್ವರ ಮತ್ತು ಕೇಂದ್ರ ಕೃಷಿ ಖಾತೆಯ ರಾಜ್ಯ ಸಚಿವರಾದ ಡಾ. ಸಂಜೀವ್ ಕುಮಾರ್ ಬಲ್ಯಾನ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಸಮಾವೇಶದಲ್ಲಿ ಮುಖ್ಯ ಭಾಷಣ ಮಾಡಿದ ಶ್ರೀ ಸದಾನಂದ ಗೌಡ ಅವರು ನರೇಂದ್ರ ಮೋದಿ ಸರ್ಕಾರ ಆರಂಭಿಸಿರುವ ಸ್ಮಾರ್ಟ್ ಸಿಟಿ ಯೋಜನೆಗೆ ನಾಡಪ್ರಭು ಕೆಂಪೇಗೌಡರು 470 ವರ್ಷ ಮೊದಲು ಬೆಂದ ಕಾಳೂರು ನಿರ್ಮಾಣವೇ ಪ್ರೇರಣೆ ಎಂದು ಹೇಳಿಕೊಂಡರು. ನಾವು ವಿದೇಶಗಳಿಗೆ ಹೋಗಿ ಅಲ್ಲಿನ ರಾಜನ ಹಿರಿಮೆಯನ್ನು ಕೊಂಡಾಡುತ್ತೇವೆ. ಆದರೆ ನಮ್ಮದೇ ವಂಶಕ್ಕೆ ಸೇರಿದ ರಾಜ ಒಬ್ಬ ಅತ್ಯಂತ ವೈಜ್ಞಾನಿಕ ರೀತಿಯಲ್ಲಿ ಐದು ಶತಮಾನಗಳ ಹಿಂದೆ ಇವತ್ತು ಪ್ರಪಂಚವೇ ಸುಂದರ ಎಂದು ಹೇಳುವ ನಗರವನ್ನು ನಿರ್ಮಿಸಿದ್ದ ಎಂದು ಹೇಳಲು ನಮಗೆ ಹೆಮ್ಮೆಯೆನಿಸುತ್ತದೆ. ಕೆಂಪೇಗೌಡರ ಉತ್ಸವ ಪ್ರತಿ ವರ್ಷ ದೇಶದ ಬೇರೆ ಬೇರೆ ಭಾಗಗಳಲ್ಲಿ ನಡೆಯಬೇಕು ಎಂದು ಶ್ರೀ ಸದಾನಂದ ಗೌಡ ಅವರು ಹೇಳಿದರು.

ಸಮಾವೇಶದಲ್ಲಿ ಮಾತನಾಡಿದ ಸಚಿವ ಶ್ರೀ ಜಿ.ಎಂ. ಸಿದ್ದೇಶ್ವರ ಅವರು ಬೆಂಗಳೂರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಎರಡು ಎಕರೆ ಜಾಗವನ್ನು ನೀಡಲು ಕೇಂದ್ರ ಸರ್ಕಾರ ಸಿದ್ಧವಿದೆ. ಅಲ್ಲಿ ಕೆಂಪೇಗೌಡರ ಅಶ್ವಾರೂಢ ಪುತ್ಥಳಿ ನಿರ್ಮಿಸಿ ಕೆಂಪೇಗೌಡ ಉದ್ಯಾನವನ ನಿರ್ಮಿಸಲು ರಾಜ್ಯ ಸರ್ಕಾರ ಮುಂದೆ ಬರಬೇಕು ಎಂದು ಹೇಳಿದರು. ನನ್ನ ಖಾತೆ ಬದಲಾಗಿರಬಹುದು. ಆದರೆ ಪ್ರತಿಮೆ ನಿರ್ಮಾಣಕ್ಕೆ ಬೇಕಾದ 2–3 ಎಕರೆ ಭೂಮಿ ನೀಡಲು ಕೇಂದ್ರ ವಿಮಾನಯಾನ ಸಚಿವಾಲಯದೊಂದಿಗೆ ನಾನು ವೈಯಕ್ತಿಕವಾಗಿ ಮಾತುಕತೆ ನಡೆಸುತ್ತೇನೆ ಎಂದು ತಿಳಿಸಿದರು.

ಶ್ರೀ ಸಂಜೀವ್ ಕುಮಾರ್ ಬಲಿಯಾನ ಅವರು











ಮಾತನಾಡುತ್ತ ಉತ್ತರ ಪ್ರದೇಶದಲ್ಲಿ ಜಾಟ್‌ಗಳಿದ್ದಂತೆ ಕರ್ನಾಟಕದಲ್ಲಿ ಒಕ್ಕಲಿಗರು ಮಣ್ಣಿನ ಮಕ್ಕಳು. ಇವತ್ತು ಬೆಂಗಳೂರಿನಂತಹ ಸುಂದರ ನಗರ ನಿರ್ಮಿಸಿದ ಕೆಂಪೇಗೌಡರ ಉತ್ಸವದಲ್ಲಿ ಪಾಲ್ಗೊಂಡು ಖುಷಿಯಾಗಿದೆ ಎಂದು ಹೇಳಿದರು. ವೇದಿಕೆಯ ಮೇಲೆ ಪ್ರೊ. ಕೃಷ್ಣೇ ಗೌಡ, ನಲ್ಲೂರು ಪ್ರಸಾದ್, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಉಪಸ್ಥಿತರಿದ್ದರು. ಶ್ರೀಮತಿ ದಿವ್ಯಾ ಆಲೂರ್ ಅವರು ಕಾರ್ಯಕ್ರಮ ನಿರೂಪಿಸಿದರು.

ಉತ್ಸವದ ಸಮಾರೋಪ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಶ್ರೀ ಅನಂತ ಕುಮಾರ್ ಅವರು ಬೆಂಗಳೂರು ಲಂಡನ್ ಅಥವಾ ಪ್ಯಾರಿಸ್ ಆಗುವುದು ಬೇಡ, ಬೆಂಗಳೂರು ಕೆಂಪೇಗೌಡರ ಬೆಂಗಳೂರು ಆಗಿ ಇರಬೇಕಾದರೆ ಅಲ್ಲಿ ಕನ್ನಡವನ್ನು ಉಳಿಸಿ, ಬೆಳೆಸಬೇಕು. ಬೆಂಗಳೂರು ಬರೀ ಭೌತಿಕವಾಗಿ ಬೆಳವಣಿಗೆಗೊಂಡರೆ ಏನೂ ಪ್ರಯೋಜನವಿಲ್ಲ ಎಂದು ಹೇಳಿದರು. ಬೆಂಗಳೂರಿನ ಬೆಳವಣಿಗೆಗೆ ಕೇಂದ್ರಮಟ್ಟದಲ್ಲಿ ಪಕ್ಷಬೇಧ ಮರೆತು ಕೆಲಸ ಮಾಡುವುದಾಗಿ ಭರವಸೆ ನೀಡಿದರು.








ಬೆಂಗಳೂರಿನ ಸುತ್ತಮುತ್ತ 300ಕ್ಕೂ ಹೆಚ್ಚು ಕೆರೆಗಳನ್ನು ನಿರ್ಮಾಣ ಮಾಡಿದ್ದ ಕೆಂಪೇಗೌಡರಿಗೆ ನಗರ ಕಟ್ಟುವ ಕುರಿತು ಅದ್ಭುತ ಕಲ್ಪನೆಯಿತ್ತು. ಬೆಂಗಳೂರನ್ನು ಧರ್ಮದ ಶಾಂತಿಯ ಬೀಡನ್ನಾಗಿಸುವಲ್ಲಿ ಅವರ ಕೊಡುಗೆ ಮರೆಯುವಂತಿಲ್ಲ ಎಂದು ಶ್ರೀ ಅನಂತ್‌ಕುಮಾರ್ ಅವರು ಹೇಳಿದರು ಕನ್ನಡದಲ್ಲಿ ಹಸ್ತಾಕ್ಷರ ಮಾಡುವುದರಿಂದ ಹಿಡಿದು ಮನೆ ಹೊರಗಡೆ ಕನ್ನಡದಲ್ಲೇ ನಾಮಫಲಕ ಹಾಕಿಕೊಳ್ಳಬೇಕು ಇದನ್ನು ನಾನು ದೆಹಲಿಯಲ್ಲಿ ಕೂಡ ಮುಂದುವರಿಸಿದ್ದೇನೆ ಎಂದರು. ಬೆಂಗಳೂರಿನ ಭವಿಷ್ಯದ ದೃಷ್ಟಿಯಿಂದ ಹಸಿರು ಪರಿಸರಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿ ಬದುಕಬೇಕು. ಸೌರಶಕ್ತಿಯ ಬಳಕೆ ಹೆಚ್ಚಾಗಬೇಕು ಎಂದು ಶ್ರೀ ಅನಂತ ಕುಮಾರ್ ಅವರು ಹೇಳಿದರು. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹಾರುವ ಹಾಗೂ ಇಳಿಯುವ ವಿಮಾನಗಳಲ್ಲಿ ನಗರದ ನಿರ್ಮಾತೃ ಕೆಂಪೇಗೌಡರ ಬಗ್ಗೆ ಒಂದು ಹೊತ್ತಿಗೆಯನ್ನು ಕೊಡಬೇಕು ಎಂದು ವಿಮಾನಯಾನ ಇಲಾಖೆಗೆ ಕೇಳಿಕೊಂಡಿದ್ದೇನೆ ಎಂದು ಹೇಳಿದ ಶ್ರೀ ಅನಂತ್ ಕುಮಾರ್ ದೆಹಲಿಗೆ ಕೆಂಪೇಗೌಡರನ್ನು ತಂದಿದ್ದಕ್ಕಾಗಿ ವಿಶ್ವ ಒಕ್ಕಲಿಗರ ಮಹಾ ವೇದಿಕೆಯನ್ನು ಅಭಿನಂದಿಸಿದರು.

ಸಮಾರೋಪ ಸಮಾರಂಭದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಮಾಜಿ ಕೇಂದ್ರ ಸಚಿವ, ಸಂಸದ ಡಾ. ಎಂ. ವೀರಪ್ಪ ಮೊಯಿಲಿ ಅವರು ಯಲಹಂಕದಲ್ಲಿ ಕೋಟೆ ನಿರ್ಮಿಸಿ ಬೆಂಗಳೂರನ್ನು ಉಪನಗರವನ್ನಾಗಿ ನಿರ್ಮಿಸಿದ ಕೆಂಪೇಗೌಡರು ಐದು ಶತಮಾನಗಳ ಹಿಂದೆ ಹೊಂದಿರುವ ದೂರದೃಷ್ಟಿ ಈಗಿನ ನಗರ ನಿರ್ಮಾಣ ಮಾಡುವವರಿಗೆ ಇದ್ದಿದ್ದರೆ ಇವತ್ತು ನಮ್ಮ ನಗರಗಳು ಇಷ್ಟು ದುಸ್ಥಿತಿಯಲ್ಲಿ ಇರುತ್ತಿರಲಿಲ್ಲ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಇನ್ನೊಬ್ಬ ಸಂಸದ ಮುದ್ದು ಹನುಮೇಗೌಡರು ಕುಣಿಗಲ್ ತಾಲೂಕಿನಲ್ಲಿರುವ ಹುತ್ತಿದುರ್ಗ ಕೋಟೆಯ ಸುತ್ತಲು ಕಲ್ಲು ಗಣಿಗಾರಿಕೆಗೆ ಅನುಮತಿ ನೀಡಬಾರದು, ಕೋಟೆ ರಕ್ಷಣೆಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕರ್ನಾಟಕ ರಾಜ್ಯ ಇಂಧನ ಸಚಿವ ಶ್ರೀ ಡಿ.ಕೆ. ಶಿವಕುಮಾರ್ ಅವರು ಕೆಂಪೇಗೌಡರು ಕಟ್ಟಿದ ಬೆಂಗಳೂರು ಇವತ್ತು ಬೃಹತ್ ಆಗಿ ಬೆಳೆದಿದೆ. ನಾವೆಲ್ಲಾ ಕೂಡ ಸಮಾಜದಿಂದಲೇ ಇಷ್ಟು ದೊಡ್ಡವರಾಗಿ ಬೆಳೆದಿದ್ದೇವೆ. ರಾಜಕಾರಣಿಗಳು ನಾವು ಕೆಲ ಸಾಕ್ಷಿಗುಡ್ಡೆಗಳನ್ನು ಸಮಾಜಕ್ಕೆ ಕೊಟ್ಟು ಹೋಗಬೇಕು ಎಂದು ಹೇಳಿದರಲ್ಲದೇ, ಕೆಲವರು ಸಮಾಜದಿಂದ ಕೇವಲ ಲಾಭ ಪಡೆಯುತ್ತಾರೆ, ಸಮಾಜಕ್ಕೆ ಮರಳಿ ಕೊಡಬೇಕೆಂಬ ಪ್ರಜ್ಞೆ ಇರುವುದಿಲ್ಲ ಎಂದು ಮಾರ್ಮಿಕವಾಗಿ ಹೇಳಿದರು. ಇವತ್ತಿನ ರಾಜಕಾರಣಿಗಳಿಗೆ ಧರ್ಮರಾಯನ ಧರ್ಮ, ಕರ್ಣ ದಾನ, ವಿದುರನ ನೀತಿ, ಕೃಷ್ಣನ ತಂತ್ರ, ಭೀಮನ ಬಲ, ಅರ್ಜುನನ ಗುರಿ ಇರಬೇಕು ಎಂದು ಹೇಳಿದರು.

ಸಮಾರೋಪ ಭಾಷಣ ಮಾಡಿದ ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಶ್ರೀ ನಾರಾಯಣ ಗೌಡರು ಯಾವುದೇ ಕಾರಣಕ್ಕೂ ಕೂಡ ಬೆಂಗಳೂರು ಪಾಲಿಕೆಯನ್ನು ವಿಭಜನೆ ಮಾಡಬಾರದು ಎಂದು ಹೇಳಿ ಇದಕ್ಕಾಗಿ ಯಾವುದೇ ಹೋರಾಟಕ್ಕೆ ಸಿದ್ಧ ಎಂದು ಎಚ್ಚರಿಕೆ ನೀಡಿದರು. ಮುಂದಿನ ವರ್ಷ ಕೆಂಪೇಗೌಡರ ಉತ್ಸವವನ್ನು ಅಮೇರಿಕಾದಲ್ಲಿ ಮಾಡುವುದಾಗಿ ಕೂಡಾ ಶ್ರೀ ನಾರಾಯಣ ಗೌಡರು ಘೋಷಿಸಿದರು.

ಮಾಜಿ ಸಚಿವ ಶ್ರೀ ಅಜಿತ್ ಸಿಂಗ್ ಮತ್ತು ಡಾ. ಸರೋಜಿನಿ ಮಹಿಷಿ ಅವರಿಗೆ ನಾಡಪ್ರಭು ಕೆಂಪೇಗೌಡ ರಾಷ್ಟ್ರೀಯ ಸಮ್ಮಾನ್ 2014 ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಹಿರಿಯ ಪತ್ರಕರ್ತ ಶ್ರೀ ಐ. ರಾಮಮೋಹನ್ ರಾವ್ (ಪತ್ರಿಕೋದ್ಯಮ), ದೆಹಲಿ ಉಪ ಪೊಲೀಸ್ ಆಯುಕ್ತ ಶ್ರೀ ಬಿ.ಎಲ್. ಸುರೇಶ್ (ದಕ್ಷ ಆಡಳಿತ), ಸುಪ್ರೀಂ ಕೋರ್ಟ್‌ನ ವಕೀಲ ಶ್ರೀ ಇ.ಸಿ. ವಿದ್ಯಾಸಾಗರ್ (ಕಾನೂನು ಸೇವೆ), ಶ್ರೀ ಜಯರಾಂ ಬನಾನ್ (ಸಮಾಜಸೇವೆ), ಡಾ. ಚಿದಾನಂದ ಮೂರ್ತಿ (ಆರೋಗ್ಯ ಪ್ರಕೃತಿ ಚಿಕಿತ್ಸೆ ಮತ್ತು ಯೋಗ), ಶ್ರೀ ಅಮರನಾಥ ಗೌಡ (ಅಂತಾರಾಷ್ಟ್ರೀಯ ಕನ್ನಡ ಸೇವೆ), ಸಾಹಿತಿ ಶ್ರೀಮತಿ ಲತಾ ರಾಜಶೇಖರ್ (ಕನ್ನಡದಲ್ಲಿ ಮಹಾಕಾವ್ಯಗಳು), ಶ್ರೀ ಮಂಜೇ ಗೌಡ (ಸರ್ಕಾರಿ ಸೇವಾ ಸಂಘಟನೆ), ಸೇರಿ 14 ಗಣ್ಯರಿಗೆ ಕೆಂಪೇಗೌಡ ರಾಷ್ಟ್ರೀಯ ಪುರಸ್ಕಾರ ನೀಡಿ ಗೌರವಿಸಲಾಯಿತು.

ಸಮಾರೋಪ ಕಾರ್ಯಕ್ರಮದಲ್ಲಿ ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಮತ್ತು ಶ್ರೀ ನಂಜಾವಧೂತ ಸ್ವಾಮೀಜಿಯವರು ಕೆಂಪೇಗೌಡರ ರಾಷ್ಟ್ರೀಯ ಉತ್ಸವವನ್ನು ಅಚ್ಚುಕಟ್ಟಾಗಿ ನೆರವೇರಿಸಿದ ವಿಶ್ವ ಒಕ್ಕಲಿಗರ ಮಹಾ ವೇದಿಕೆಯ ಕನ್ನಡ ಸತ್ಯ ರಂಗಣ್ಣ ಮತ್ತು ದೆಹಲಿ ಕರ್ನಾಟಕ ಸಂಘದ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರನ್ನು ಸನ್ಮಾನಿಸಿದರು.

ಹಿರಿಯ ಸಾಹಿತಿ ಡಾ.ಪುರುಷೋತ್ತಮ ಬಿಳಿಮಲೆ ಅವರು ಕಾರ್ಯಕ್ರಮ ನಿರೂಪಿಸಿದರು. ಅ

***ಅಭಿಮತ ವರದಿ***

# ಸದಾ ಮನದಲ್ಲಿರುವ ಸುಧಾ

ಮನುಷ್ಯನ ಜೀವನದಲ್ಲಿ ಸಂಬಂಧಗಳು ಬಹಳ ಪ್ರಾಮುಖ್ಯತೆಯನ್ನು ಪಡೆದಿವೆ. ದೊಡ್ಡ ಹೆಮ್ಮರವಾಗಲು ಹಲವಾರು ರೆಂಬೆ ಕೊಂಬೆಗಳು ಹೇಗೆ ಮುಖ್ಯವೋ ಹಾಗೆ ನಮಗೂ ಸಂಬಂಧಗಳ ವಂಶವೃಕ್ಷದ ಬಳ್ಳಿ ಅವಶ್ಯಕ. ಅನುಭವ ಅನುಭಾವಗಳ ಮೇಳೈಸಿ ಬರೆಯುತ್ತಿದ್ದೇನೆ. ಹೆಣ್ಣಿನ ಮನಸ್ಸನ್ನು ಮತ್ತೊಂದು ಹೆಣ್ಣೇ ಅರ್ಥಮಾಡಿಕೊಳ್ಳಲು ಸಾಧ್ಯ. ಅದಕ್ಕೆ ಸ್ಪಂದಿಸುವುದು ವೈಯಕ್ತಿಕವಾದ ವಿಚಾರ. ನನ್ನ ಜೀವನದಲ್ಲಿ ಇದನ್ನು ನಾನು ದೃಢವಾಗಿ ನಂಬುತ್ತೇನೆ. ನಂಬುತ್ತಿದ್ದೇನೆ.

ನನಗೊ ನನ್ನ ಅಕ್ಕನಿಗೂ ಎಂಟು ವರ್ಷಗಳ ಅಂತರ. ನಾವಿಬ್ಬರು ನೆಪ ಮಾತ್ರಕ್ಕೆ ಅಕ್ಕ ತಂಗಿ. ಅವಳು ನನ್ನ ಆತ್ಮದ ಗೆಳತಿ. ಮನದ ಮಾತುಗಳು, ಆಂತರ್ಯದ ಮಾತುಗಳು, ತವಕಗಳು, ನೋವು, ಕಷ್ಟ, ಸುಖ ಎಲ್ಲದಕ್ಕೂ ಸ್ಪಂದಿಸುವವಳು. ಮಮತೆಯಿಂದ ನೇವರಿಸಿ ಪ್ರೀತಿ ನೀಡುವವಳು. ತಪ್ಪಿದ್ದಲ್ಲಿ ದಂಡಿಸುತ್ತಾಳೆ ಏನಲ್ಲ? ಆಕೆ, ಕೆಲವೊಮ್ಮೆ ಎಲ್ಲಕ್ಕೂ ಮಿಗಿಲಾಗಿ ನಿಂತು ರಕ್ಷಣೆಯೊದಗಿಸುವ ರಕ್ಷಾ ಕವಚವಾಗುತ್ತಾಳೆ. ಇದು ಕೇವಲ ನನ್ನ ಅನಿಸಿಕೆ, ನಿಲುವು ಮಾತ್ರವಲ್ಲ. ಗರಿಷ್ಟ ಹೆಂಗಳೆಯರು ಇದಕ್ಕೆ ಸಮ್ಮತಿಸುತ್ತಾರೆ. ಯಾರು ಯಾವುದೇ ಪರಿಸ್ಥಿತಿಯಲ್ಲಿ ಕೈ ಬಿಟ್ಟರೆ ಅಕ್ಕ ಕೈ ಬಿಡುವುದಿಲ್ಲ. ಆರ್ಥಿಕವಾಗಿ, ಸಾಮಾಜಿಕವಾಗಿ, ಮಾನಸಿಕವಾಗಿ, ಬೌದ್ಧಿಕವಾಗಿ ಹೆಜ್ಜೆ ಹೆಜ್ಜೆಗೂ ಪ್ರೋತ್ಸಾಹಿಸುತ್ತಾಳೆ. ಎರಡು ಜಡೆ ಸೇರಿದರೆ ಕಲಹ ಎನ್ನುವರು ಆದರೆ ಈ ಎರಡು ಜಡೆಗಳ ಕಲರವ ಮನಸ್ಸಿಗೆ ಹಿತ ಮುದ ನೀಡುತ್ತದೆ. ಬೆನ್ನಿಂದೆ ನಾ ಬಂದು ನನ್ನ ಹೃದಯದಲಿ ನೀ ಕುಳಿತೆ. ಸುತ್ತಾಡಲು ಹೊರಗೆ ಹೋದಾಗಲೂ ಮಗಳಿಗೆ, ತಂಗಿಗೆ ಆಯ್ಕೆ ಮಾಡಿಕೊಂಡು ನಂತರ ತನಗೆ ತೆಗೆದುಕೊಳ್ಳುವಳು ನಾನು ಆಕೆಗೆ ಏನು ಕೊಟ್ಟಿರುವೆ?

ದೈಹಿಕವಾಗಿ ಸಾವಿರಾರು ಮೈಲಿ ದೂರವಿದ್ದರು ಮಾನಸಿಕವಾಗಿ ನಿರಂತರವಾಗಿ ಜೊತೆಗಿರುತ್ತೇನೆ. ಎಷ್ಟೋ ವೇಳೆ ಸುಧಾಕ್ಕಳ ನೆನಪಾದಾಗ ತಬ್ಬಿ ಮುದ್ದಾಡೋಣ ಎಂದನಿಸುತ್ತದೆ. ನಾನು ಭಾವನಾಜೀವಿ ಭಾವನೆಯಲ್ಲಿಯೇ ಬಾವುಕಳಾಗಿ ಮಾತನಾಡಿ ಕಣ್ಣೀರು ಹರಿಯಬಹುದು ಎಂದು ಗೊತ್ತಾಗೋ ವೇಳೆಗೆ 'ಹೇ ಹೋಗೆ ಸಾಕು' ಎಂದು ಮಾತು ಮರೆಸಿ ಪಕ್ಕಕ್ಕೆ ಸರಿದು ಕಣ್ಣೊರೆಸಿಕೊಳ್ಳುವಳು.

ಸುಂದರ ಮುಖದಲ್ಲಿ ಗುಂಡು ಗುಂಡು ಕೆನ್ನೆ ಎರಡೂ ಕೆನ್ನೆಗಳ ನಡುವಿನ ಗುಳಿ, ಇಂಪಾದ ಸ್ವರ ಮಾತನಾಡಿದರೂ ಹಾಡು ಕೇಳಿದಂತಿರುತ್ತದೆ. ಬಾಲ್ಯದಲ್ಲಿ ನಾವು ಕಳೆದ ಕ್ಷಣಗಳು . . . ಆಹಾ! ಮಾಡದ ಅಡುಗೆಗಳಿಲ್ಲ. ಒಮ್ಮೆ ಅಮ್ಮ ಬೇರೆ ಊರಿಗೆ ಹೋಗಿದ್ದರು. ಅಡುಗೆ ಮನೆ ಉಸ್ತುವಾರಿ ಸುಧಾಳಿಗೆ (ಅಕ್ಕ) ಬಂದಿತ್ತು. ಏಕೆಂದರೆ ನಾನು ಅಕ್ಕ ಇಬ್ಬರೇ ಮಕ್ಕಳು ಅಪ್ಪ ಹೈಸ್ಕೂಲ್ ಟೀಚರ್, ಚಿಕ್ಕ ಚೊಕ್ಕ ಕುಟುಂಬ. ಆದಿನ ಊಟ, ಟೊಮೊಟೊ ಚಟ್ನಿ ಮಾಡಬೇಕೆಂದು ತೀರ್ಮಾನಿಸಿ ಮಾಡಿದವಳು. ಚಟ್ನಿ ಮಾಡುವ ವಿಧಾನವನ್ನು ಎಲ್ಲೋ ಯಾರೋ ಹೇಳಿದ ನೆನಪು, ಹಾಗೆ ಮಾಡಿದಳು ಅದು ಕೆಟ್ಟು ಹೋಯಿತು ಅವಳಿಗೆ ತಿನ್ನಲಾಗುತ್ತಿಲ್ಲ. ಮೊದಲು ಅನ್ನ ಮಾಡಿದಳು ಬಿತ್ತಾಕಾರದ ತಟ್ಟೆಯಲ್ಲಿ ಬೌಲ್‌ನಿಂದಾಗಿ ಅನ್ನಕ್ಕೆ ಆಕಾರಕೊಟ್ಟಳು. ಚಮಚಕ್ಕೆ ಬದಲಾಗಿ ಮುಳ್ಳಿನ ಚಮಚ (ಫೋರ್ಕ್) ಕೊಟ್ಟು ನನಗೆ ಅರಿಯದ ಭಾಷೆಯಲ್ಲಿ ಟೊಮೊಟೊ ಟೆಟ್ರಾಯಿಸ್ ವಿತ್ ರೈಸ್ ಎಂದು ಹೇಳಿ ಕೊಟ್ಟಳು. ನಾನು ಅದರ ರುಚಿಯೇ ಹೀಗೆ ಭಯಂಕರವಾದದ್ದು ಎಂದು ಕಷ್ಟಪಟ್ಟು ಬೆಳಗ್ಗೆ, ಮಧ್ಯಾಹ್ನ ತಿಂದಿದ್ದೆ. ಎಷ್ಟೋ ತಿಂಗಳುಗಳ ನಂತರ ನಿಜ ತಿಳಿಯಿತು. ಸೀದು ಕರಕಲಾಗಿದ್ದ ಚಟ್ನಿ ಅದು ಎಂದು. ಆಗ ಸುಧಾಳನ್ನು ಅಟ್ಟಾಡಿಸಿಕೊಂಡು ಹೊಡೆದಿದ್ದೆ. ಬಾಲ್ಯದ ಜೀವನು ಸಿಹಿಕಹಿ ಘಟನೆಗಳಿಂದ ಆವೃತ್ತವಾಗಿದ್ದು ಸುಖದುಃಖವನ್ನು ಅನುಭವಿಸಿ ಸಂತಸಗೊಳ್ಳುತ್ತಿದ್ದೆವು. ವಯಸ್ಸಿಗೆ ಬಂದಾಗ ಮದುವೆ ಎಂಬ ಸಂಕೋಲೆಗಳು ನಮ್ಮನ್ನು ಬಹುದೂರ ಮಾಡಿದವು. ಸಂಬಂಧಗಳು ಬೆಸೆದುಕೊಳ್ಳುತ್ತಾ ಗಟ್ಟಿಯಾಗಿ ಬೃಹದಾಕಾರವಾಗಬೇಕಾಗಿತ್ತು. ಆದರೆ ಸಮಯ, ಸನ್ನಿವೇಶ ಪರಿಸ್ಥಿತಿಗಳು ಪೂರಕವಾಗಲಿಲ್ಲ. ಆದರೆ ನಮ್ಮಿಬ್ಬರ ಆಪ್ತತೆ ಮಾತ್ರ ಗಟ್ಟಿಯಾಗುತ್ತಾ ಹೋಗುತ್ತಿದೆ. ತಾಯಿ ಮನೆ ಒಂದು ತವರಾದರೆ, ಅಕ್ಕ ನನಗೆ ಇನ್ನೊಂದು ತವರು. ಸುಧಾ ನನ್ನಾತ್ಮದ ಚಿಲುಮೆ ವರ್ಷಕ್ಕೆ ಒಮ್ಮೆ ಭೇಟಿಯಾಗುತ್ತೇವೆ. ಆ ದಿನಕ್ಕಾಗಿ ವರ್ಷವೆಲ್ಲಾ ಕಾಯುತ್ತೇವೆ. ಅವಳ ಇನ್ನೊಂದು ವಿಶೇಷ ಗುಣ ಯಾವ ಹಬ್ಬ ಹರಿದಿನಗಳನ್ನು ಆಚರಣೆ ಮಾಡುವುದಿಲ್ಲ. ಹೆಸರಿಗೆ ಮಾತ್ರ ದೇವರ ಮನೆ ದೀಪ ಹಚ್ಚಲ್ಲ, ದೇವರಲ್ಲಿ ನಂಬಿಕೆ ಶ್ರದ್ಧೆ, ತನ್ನ ಓದು ಹಾಗೂ ಉಪನ್ಯಾಸದಲ್ಲಿ ತೋರಿಸುತ್ತಾಳೆ. ಕೆಲಸದಲ್ಲಿ ನಿರ್ವಂಚನೆ, ಕಾಯಕವೇ ಕೈಲಾಸ ಎಂದು ನಂಬಿರುವಳು. ನಾವು ಎಲ್ಲರಿಗಾಗಿ ಎಲ್ಲರಿಗೂ ಚೆನ್ನಾಗಿ ಕಾಣಬೇಕೆಂದಿರಬಾರದು ನಮಗೆ ನಾವು ಚೆನ್ನಾಗಿ ಕಾಣುತ್ತೇವಾ ಎಂಬುದನ್ನು ತಿಳಿಯಬೇಕು.

ನಾನು ದೇವರಲ್ಲಿ ಬೇಡುವುದಿಷ್ಟೆ ಮುಂದಿನ ಜನ್ಮದಲ್ಲೂ ಸುಧಾಳೆ ನನ್ನ ಅಕ್ಕಳಾಗಬೇಕು. ದೇಹ ಮನಸ್ಸು ಹತ್ತಿರದಲ್ಲಿದ್ದು ಪ್ರೀತಿಯ ನಲ್ಮೆಯ ಮಾತುಗಳೊಂದಿಗೆ ಜೀವಿಸಬೇಕು. ಇದು ಕೇವಲ ನನ್ನ ಅಕ್ಕ ಮಾತ್ರವಲ್ಲ ಎಲ್ಲಾ ಹೆಣ್ಣು ಮಕ್ಕಳ ಅಕ್ಕ ಸಾಮಾನ್ಯವಾಗಿ ಹೀಗೆ ಇರುತ್ತಾಳೆ. ನನಗೆ ವಿಶೇಷವೆನಿಸುತ್ತಿದೆ. ಕಾರಣ ನಾನು ಆಕೆಯಿಂದ ದೂರವಿದ್ದೇನೆ ಎಂತಲೋ ಅಥವಾ ಎಲ್ಲರನ್ನೂ ಅವಳಲ್ಲೇ ಕಾಣುತ್ತೇನೆ. ಎಲ್ಲರಿಗೂ ಸಹಾಯ ಮಾಡುವ ನಿಸ್ವಾರ್ಥದ ಸದಾ ನಗು ಮುಖದ ನನ್ನ ಪ್ರೀತಿಯ ಅಕ್ಕ ಸುಧಾ. ಅ


*ಎಂ. ಎಸ್. ಲಾವಣ್ಯಬಸವರಾಜ*



# ನೀ ನಿರದ

ನೀನಿರದ ಬಾಳು ಬರೀಗೋಳು
ನೀನಿರದ ಜೀವನ ನಿರ್ಜೀವವು
ನೀನಿರದ ಮನೆ ನರಕ ಸದೃಶವು
ನೀನಿರದದಡೆ ಸ್ಮಶಾನ ಮೌನವು
ನೀನಿರಲು ಬಾಳು ಸಂತಸದ ಹೊನಲು
ನೀನಿರಲು ಜೀವನ ಸಂಜೀವನ
ನೀನಿರಲು ಮರೆವೆ ದುಃಖವೆಲ್ಲವ
ನೀನಿರಲು ಕಾಣುವೆ ಜಗದ ಸುಖವ
ಮುದ್ದು ಕಂದ ನೀ ಬರಲು
ನಂದಗೋಕುಲವವೀ ನಮ್ಮೀ ಮನೆಯು

***ಸು.ಚ. ಹೇಮಲತ***





# ನಾನು–ನೀನು

ನಾನು ನೀನಾದಾಗ ನೀನು ನಾನಾದಾಗ
ಅವರೆಲ್ಲ ನಮಗಾಗಿ ನಿಲ್ಲಬಹುದು
ಬಾನು ಬುವಿಯಾದಾಗ ಬುವಿಯು ಬಾನಾದಾಗ
ನಕ್ಷತ್ರಗಳು ಸುತ್ತಿ ನಿಲ್ಲಬಹುದು. ॥ 1 ॥

ನಾನು ನಗೆಯಾದಾಗ ನೀನು ಅಳುವಾದಾಗ
ಚಂದಿರನ ತಂಪು ಬಿಸಿಯಾಗಬಹುದು.
ನಾನು ಅಳುವಾದಾಗ ನೀನು ನಗೆಯಾದಾಗ
ಸೂರ್ಯಪ್ರಖರತೆ ಸರಿದು ತಂಪಾಗಬಹುದು ॥2॥

ನಾನು ಬಾನಾದಾಗ ನೀನು ಬುವಿಯಾದಾಗ
ಗ್ರಹಗಳೆಲ್ಲವೂ ಕುಣಿದು ಕುಪ್ಪಳಿಸಬಹುದು.
ನಾನು ಹಾಲಾದಾಗ ನೀನು ಜೇನಾದಾಗ
ಸಮರಸದ ಜೀವನವು ಬೆಳಗಬಹುದು. ॥ 3 ॥

***ಸುಧಾಕರ ಕುರಂದವಾಡ***

# ಏ ಹುಡುಗೀ . . .

ನಮ್ಮೂರ ಮೋಟಾರ ನಿಲ್ದಾಣದಲಿ ನಾನು
ನಿಂತಾಗ ನಿನ್ನನ್ನು ನೋಡಿಬಿಟ್ಟೆ.
ಯಾವುದೋ ಭಾವದಲಿ ಕಣ್ಣ ತಿರುವಿದ ನೀನು
ನನ್ನೊಬ್ಬನನೇ ನೋಡಿ ನಕ್ಕುಬಿಟ್ಟೆ. ॥ 1 ॥

ನಿನ್ನ ನಗುವನು ನೋಡಿ ನನಗೆ ಸಹ ನಗುಬಂತು
ಧೈರ್ಯಸಾಲದೇ ನಾನು ನಗು ಬೀರಲಿಲ್ಲ.
ನೀನಾರೋ ನಾನಾರೋ–ಮೋಟಾರು ಬಂತು
ಚಟ್ಟೆಂದು ಒಳಹೊಕ್ಕು ಕೈ ಬೀಸಲಿಲ್ಲ. ॥ 2 ॥

ಜನ್ಮ ಜನ್ಮಾಂತರದ ಸಂಬಂಧ ಇದ್ದರೆ
ಮತ್ತೊಮ್ಮೆ ನೀನು ನನಗೆ ಸಿಕ್ಕೇ ಸಿಗುವಿ.
ನಿನ್ನ ನಗು ನನ್ನ ನಗು ಸೇರಿ ಒಂದಾದರೆ
ನನ್ನ ಮನೆಗೇ ನೀನು ತುಂಬಿ ಬರುವಿ. ॥ 3 ॥

***ಸುಧಾಕರ ಕುರಂದವಾಡ***



# ಕರ್ನಾಟಕ ರಾಜ್ಯೋತ್ಸವ

ಕರ್ನಾಟಕ ವಾರ್ತಾ ಮತ್ತು ಪ್ರಚಾರ ಇಲಾಖೆ, ದೆಹಲಿ ಕರ್ನಾಟಕ ಸಂಘ ಮತ್ತು ಗುರ್‌ಗಾಂವ್ ಕನ್ನಡ ಸಂಘದ ಸಂಯುಕ್ತ ಆಶ್ರಯದಲ್ಲಿ ಕರ್ನಾಟಕ ರಾಜ್ಯೋತ್ಸವವನ್ನು ಗುರ್‌ಗಾಂವ್‌ನಲ್ಲಿ ಇದೇ ಡಿಸೆಂಬರ್ 7 ರಂದು ಆಚರಿಸಲಾಯಿತು.

## ಗುರ್‌ಗಾಂವ್ ಕನ್ನಡ ಸಂಘ



ಮುಖ್ಯ ಅತಿಥಿಯಾಗಿ ಕರ್‌ಕರ್‌ಡೂಮಾ ಜಿಲ್ಲಾ ನ್ಯಾಯಲಯದಲ್ಲಿ ನ್ಯಾಯಾಧೀಶರಾದ ಶ್ರೀ ಎ.ಎಸ್. ಜಯಚಂದ್ರ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಮತ್ತು ಕರ್ನಾಟಕ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಅಧಿಕಾರಿಗಳಾದ ಶ್ರೀ ಆರ್. ನವೀನ್ ಮತ್ತು ಶ್ರೀ ಶ್ರೀನಿವಾಸ್ ಉಪಸ್ಥಿತರಿದ್ದರು.

ರಾಜ್ಯೋತ್ಸವದ ಅಂಗವಾಗಿ ಶೃತಿ ಕೆ.ಪಿ ಅವರ ತಾಮರ ನೃತ್ಯ ತಂಡದ ಕಲಾವಿದರಿಂದ ಭರತನಾಟ್ಯ, ಮೋಹಿನಿ ನೃತ್ಯ, ಜಾನಪದ ನೃತ್ಯ ಕಾರ್ಯಕ್ರಮ ನಡೆಯಿತು. ಎಚ್. ಫಲ್ಗುಣ, ಹೊಂಬಾಳೆ ಪ್ರತಿಭಾರಂಗ ಇವರು ಜಿ.ಪಿ. ರಾಜರತ್ನಂ ಮತ್ತು ಕೆ.ಎಸ್. ನರಸಿಂಹ ಸ್ವಾಮಿ ಅವರ ಕವನಗಳನ್ನು ಹಾಡಿದರು. ರವೀಂದ್ರನಾಥ ಸಿರಿವರ ಅವರು ಹಳೆ ಕಾಲದ ಚಲನಚಿತ್ರಗಳ ಹಾಡುಗಳನ್ನು ಹಾಡಿದರು. ಶೃತಿ ಸಂಜಯ್ ಅವರು ಕೆಲವು ಹಾಡುಗಳನ್ನು ಹಾಡಿದರು.

ಗುರ್‌ಗಾಂವ್ ಕನ್ನಡ ಸಂಘದ ಪುಟಾಣಿಗಳ ಭಾಷಣ, ನೃತ್ಯ, ಹಾಡು, ಕಿರುನಾಟಕಗಳು ಮತ್ತು ಯೋಗೇಶ್ ದಂಪತಿಗಳ ನೃತ್ಯ ಪ್ರದರ್ಶನವೂ ನಡೆಯಿತು. ಸಾಯಿ ಸಾರ್ ಅವರ ಕೊಳಲು ವಾದನ, ಕೃಷ್ಣಪ್ಪ ಮತ್ತು ಹೊಂಡ ಕನ್ನಡಿಗನ ಹಾಡುಗಳು ಪ್ರೇಕ್ಷಕರ ಮನಸ್ಸನ್ನು ಮುದಗೊಳಿಸಿದವು. ಗುರ್‌ಗಾಂವ್ ಕನ್ನಡ ಸಂಘದ ಅಧ್ಯಕ್ಷರಾದ ವಸಂತ ರಾವ್ ಮತ್ತು ಕಾರ್ಯದರ್ಶಿ ಸಾಬು ದರ್ಗಾ ಅವರು ಅತಿಥಿಗಳನ್ನು ಸ್ವಾಗತಿಸಿದರು. ಶ್ವೇತಾ ರಾಜನ್ ಮತ್ತು ರಾಧಾಭಟ್ ಅವರ ವ್ಯಾಖ್ಯಾನದಿಂದ ಕಾರ್ಯಕ್ರಮ ಆರಂಭಗೊಂಡಿತು. ಅ

*ಸಾಬು ದರ್ಗಾ*

---

## ನೋಯ್ಡಾ



ಕರ್ನಾಟಕ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆ ಹಾಗೂ ದೆಹಲಿ ಕರ್ನಾಟಕ ಸಂಘದ ಸಂಯುಕ್ತಾಶ್ರಯದಲ್ಲಿ 2014ರ ಸಾಲಿನ ಕರ್ನಾಟಕ ರಾಜ್ಯೋತ್ಸವವನ್ನು, ರಾಷ್ಟ್ರ ರಾಜಧಾನಿಯ ಸರಹದ್ದಿನ ನೋಯ್ಡಾದ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ಡಿಸೆಂಬರ್ 6ರಂದು ವಿಜೃಂಭಣೆಯಿಂದ ಆಚರಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ರಾಜ್ಯಸಭಾ ಸದಸ್ಯ ಶ್ರೀ ಆಸ್ಕರ್ ಫರ್ನಾಂಡಿಸ್ ಅವರು ಸುತ್ತೂರು ಮಠದ ಸ್ವಾಮೀಜಿಯವರನ್ನು ಸ್ಮರಿಸಿಕೊಂಡು, ರಾಜಧಾನಿಯ ಸರಹದ್ದಿನಲ್ಲಿ, ಅದರಲ್ಲೂ ಶ್ರೀಗಳ ಕೃಪಾಕಟಾಕ್ಷದಿಂದ ನಿರ್ಮಿತವಾದ ಸಂಸ್ಥೆಯ ಸಭಾಂಗಣದಲ್ಲಿ ನಡೆಯುತ್ತಿರುವ ಸಮಾರಂಭದಲ್ಲಿ ಭಾಗವಹಿಸಿರುವುಕ್ಕೆ ಸಂತಸ ವ್ಯಕ್ತಪಡಿಸಿ ಕಾರಣಕರ್ತರನ್ನು ಅಭಿನಂದಿಸಿದರು. ಅವರು ಕನ್ನಡದ ಕಂಪು ರಾಷ್ಟ್ರದ ಎಲ್ಲೆಡೆ ಪಸರಿಸಲೆಂದು ಆಶಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಹಿರಿಯ ಸಾಹಿತಿ ಪ್ರೊ. ಎಚ್.ಎಸ್.ಶಿವಪ್ರಕಾಶ್ ಅವರು ತಮ್ಮ ಭಾಷಣದಲ್ಲಿ ನಮ್ಮ ಮಾತೃ ಭಾಷೆಯಾದ ಕನ್ನಡದ ಪ್ರಾಮುಖ್ಯತೆ ಮತ್ತು ಮಹತ್ವದ ಬಗ್ಗೆ ಅರಿವು ಮೂಡಿಸಿದರು. ಕನ್ನಡ ಭಾಷೆಯು ನಮ್ಮ ನಾಡಲ್ಲೇ ಕ್ಷೀಣಿಸುತ್ತಿರುವ ಬಗ್ಗೆ ವಿಷಾದ ವ್ಯಕ್ತಪಡಿಸಿದರು. ಕನ್ನಡವನ್ನು ಉಳಿಸಿ, ಬೆಳೆಸುವುದರ ಬಗ್ಗೆ ತಿಳುವಳಿಕೆ ನೀಡಿದರು. ಕರ್ನಾಟಕ ರಾಜ್ಯದ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲೂ ಪ್ರಾಥಮಿಕ ಹಂತದಿಂದ ಕಡ್ಡಾಯವಾಗಿ ಕನ್ನಡ ಮಾಧ್ಯಮವನ್ನು ಅನುಷ್ಠಾನಗೊಳಿಸಬೇಕು. ಎಲ್ಲಾ ಕನ್ನಡಿಗರೂ ತಾವು ದೇಶದ ಯಾವುದೇ ಮೂಲೆಯಲ್ಲಿದ್ದರೂ ತಮ್ಮ ಮನೆಯಲ್ಲಿ ನಮ್ಮ ಮಾತೃಭಾಷೆಯಲ್ಲಿ ಮಾತನಾಡಬೇಕು. ಮತ್ತು ತಮ್ಮ ಮಕ್ಕಳಿಗೆ ಕನ್ನಡ ಕಲಿಸುವುದರಿಂದ ಕನ್ನಡವನ್ನು ಉಳಿಸಲು ಖಂಡಿತ ಸಾಧ್ಯ ಎಂದು ಪ್ರೊ. ಶಿವಪ್ರಕಾಶ್ ಅವರು ಅಭಿಪ್ರಾಯಪಟ್ಟರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಅಧ್ಯಕ್ಷತೆ ವಹಿಸಿ ಮಾತಾಡುತ್ತಾ ರಾಜಧಾನಿ ವ್ಯಾಪ್ತಿಯಲ್ಲಿ ಕನ್ನಡ ಭಾಷೆ ಮತ್ತು ಕನ್ನಡಿಗರನ್ನು ಇನ್ನೂ ಗಟ್ಟಿಗೊಳಿಸುವ ಬಗ್ಗೆ ದೆಹಲಿ ಕರ್ನಾಟಕ ಸಂಘವು ಹಮ್ಮಿಕೊಂಡಿರುವ ರೂಪುರೇಷೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿದರು. ದೆಹಲಿಯ ಪ್ರತಿಷ್ಠಿತ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ, ಸಂಘದ ಹಾಗೂ ಹಿರಿಯರ ಮಾರ್ಗದರ್ಶನದ ಪ್ರಯತ್ನದ ಫಲವಾಗಿ ಕನ್ನಡ ಅಧ್ಯಯನ ಪೀಠವನ್ನು ಸ್ಥಾಪಿಸಲು ಅಂಗೀಕಾರ ಸಿಕ್ಕಿರುವುದು ಹಾಗೂ ಪೀಠವನ್ನು ಪ್ರಾರಂಭಿಸಲು ಕರ್ನಾಟಕ ಸರಕಾರದಿಂದ ಹಣಕಾಸಿನ ಅನುದಾನ ದೊರೆತಿರುವ ಬಗ್ಗೆ ವಿವರಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಬೆಂಗಳೂರಿನ ಹೊಂಬಾಳೆ ಪ್ರತಿಭಾರಂಗದ ಎಚ್.ಫಲ್ಗುಣ ಮತ್ತು ತಂಡದವರಿಂದ ನಾಡಗೀತೆ, ಸುಶ್ರಾವ್ಯ ಸುಗಮ ಸಂಗೀತ ಮತ್ತು ತಾಮರ ನೃತ್ಯಕೇಂದ್ರದ ಶೃತಿ ಕೆ.ಪಿ. ಮತ್ತು ತಂಡದವರಿಂದ ವಿವಿಧ ಶೈಲಿಯ ನೃತ್ಯ ಪ್ರದರ್ಶನ ನಡೆಯಿತು.

ಜೆಎಸ್‌ಎಸ್ ಸಂಸ್ಥೆಯ ವತಿಯಿಂದ ಶ್ರೀ ಎಸ್. ಎಸ್. ಪ್ರಸಾದ್, ಪ್ರಧಾನಾಚಾರ್ಯರು(ಪ್ರಭಾರ) ಅವರು ಅತಿಥಿಗಳಿಗೆ ನೆನಪಿನ ಕಾಣಿಕೆಯನ್ನು ನೀಡಿದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಸಲಹೆಗಾರರಾದ ಶ್ರೀ ಎಂ.ಎಲ್.ಗುಪ್ತ, ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ್, ವಾರ್ತಾ ಇಲಾಖೆಯ ಶ್ರೀ ಎಂ.ರವಿ ಕುಮಾರ್ ಹಾಗೂ ಶ್ರೀ ನವೀನ್ ಅವರು ಉಪಸ್ಥಿತರಿದ್ದರು. ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಯ ಕುಲಸಚಿವರಾದ ಡಾ. ಎಸ್. ಎಸ್. ಶಿರೂರ್ ಅವರು ವಂದನಾರ್ಪಣೆಯನ್ನು ಸಲ್ಲಿಸಿದರು. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮುಖ್ಯ ಸಂಯೋಜಕರಾದ ಶ್ರೀ ರವೀಂದ್ರನಾಥ ಸಿರಿವರ ಅವರು ನಿರೂಪಿಸಿದರು. ಅ

*ಎಸ್.ಜಯಶಂಕರ್ ಆರಾಧ್ಯ*

## ಗೋಕರ್ಣ ಮಂಡಳದ ವೆಬ್‌ಸೈಟ್‌ಗೆ ಚಾಲನೆ

ದೆಹಲಿಯ ಹವ್ಯಕ ಬಾಂಧವರ ಚಟುವಟಿಕೆಗಳು, ಕಾರ್ಯಕ್ರಮಗಳು ಸೇರಿದಂತೆ ಹತ್ತು ಹಲವು ವಿಚಾರಗಳ ಬಗ್ಗೆ ಬೆಳಕು ಚೆಲ್ಲುವ ಗೋಕರ್ಣ ಮಂಡಳದ ಸದಸ್ಯರು ಸಿದ್ದಪಡಿಸಿದ ವೆಬ್‌ಸೈಟ್ ವಿನೂತನವಾಗಿದ್ದು, ಇದು ದೆಹಲಿಯ ಗೋಕರ್ಣ ಮಂಡಳದ ಪ್ರಗತಿಯ ಪಥಕ್ಕೆ ನಾಂದಿ ಹಾಡಲಿ ಎಂದು ಕಾರವಾರ ಸಂಸದ ಶ್ರೀ ಅನಂತ ಕುಮಾರ್ ಹೆಗಡೆ ಅವರು ಆಶಯ ವ್ಯಕ್ತಪಡಿಸಿದರು.

ದೆಹಲಿಯ ಫಿರೋಜ್ ಷಾ ರಸ್ತೆಯಲ್ಲಿರುವ ತಮ್ಮ ನಿವಾಸದಲ್ಲಿ ಗೋಕರ್ಣ ಮಂಡಳ ವೆಬ್‌ಸೈಟ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ಕಾರವಾರ ಲೋಕಸಭೆ ಕ್ಷೇತ್ರ, ಕರಾವಳಿ ಪ್ರದೇಶ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ತಾವು ನಡೆಸಿರುವ ಅಭಿವೃದ್ಧಿ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.

ನಗರೀಕರಣದ ಮಧ್ಯೆ ಅತ್ಯಂತ ಪ್ರಮುಖವಾಗಿರುವ ಪರಿಸರ ರಕ್ಷಣೆ ನಮ್ಮ ಮುಂದಿರುವ ಬಹುದೊಡ್ಡ ಸವಾಲು. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಪರಿಸರ ಜಾಗೃತಿಯನ್ನು ಬೆಳೆಸಿಕೊಳ್ಳುವ ಜತೆಗೆ ಮುಂದಿನ ತಲೆಮಾರಿನಲ್ಲೂ ಈ ಬಗ್ಗೆ ಅರಿವು ಮೂಡಿಸಬೇಕು. ಹಾಗೇ ಪ್ರಾಚೀನ ಸಂಸ್ಕೃತಿ, ಪರಂಪರೆಗಳನ್ನು ಉಳಿಸುವ ದಿಕ್ಕಿನಲ್ಲೂ ನಾವು ಕಾರ್ಯೋನ್ಮುಖರಾಗಬೇಕು ಎಂದು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ಗೋಕರ್ಣ ಮಂಡಳದ ಹಿರಿಯ ಸದಸ್ಯ ಶ್ರೀ ರಾಮಚಂದ್ರ ಭಟ್ ಅವರು ಸಂಸದ ಅನಂತ್ ಕುಮಾರ್ ಹೆಗಡೆಯವರಿಗೆ ಶಾಲು ಹೊದಿಸಿ ಸನ್ಮಾನಿಸಿದರು.

ಮಂಡಳದ ಸದಸ್ಯರಾದ ಡಾ. ಬಿ.ವಿ. ಅಡ್ಕೋಳಿ, ಶ್ರೀ ನರಸಿಂಹ ಹೆಗಡೆ, ಅಧ್ಯಕ್ಷ ಶ್ರೀ ನಾರಾಯಣ ಭಟ್, ಶ್ರೀ ಸತೀಶ್ ಹೆಗಡೆ, ಮೊದಲಾದವರು ಗೋಕರ್ಣ ಮಂಡಳದ ಕಾರ್ಯಚಟುವಟಿಕೆ ಸೇರಿದಂತೆ ಹವ್ಯಕ ಸಮುದಾಯದ ಜವಾಬ್ದಾರಿಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ವೆಬ್‌ಸೈಟ್ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸಿದ ಶ್ರೀ ಆದಿತ್ಯ ನಾರಾಯಣ ಭಟ್ ಅವರನ್ನೂ ಅಭಿನಂದಿಸಲಾಯಿತು. ಶ್ರೀ ಗೌತಮ್ ಹೆಗಡೆ ನಿರ್ವಹಿಸಿದ ಕಾರ್ಯಕ್ರಮದಲ್ಲಿ ಶ್ರೀ ಮುರುಳೀಕೃಷ್ಣ ಸ್ವಾಗತಿಸಿದರು. ಶ್ರೀ ದೀಪಕ್ ಶರ್ಮ ಧನ್ಯವಾದ ಸಮರ್ಪಿಸಿದರು.

ವೆಬ್‌ಸೈಟ್ ವಿಳಾಸ www.gkmdelli.blogspot.in

*ಎಂ.ಎನ್. ಭಟ್*

## ಜಿ.ಎಚ್. ನಾಯಕರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ



ಕನ್ನಡದ ಖ್ಯಾತ ವಿಮರ್ಶಕ, ಕವಿ, ಬರಹಗಾರ ಪ್ರೊ| ಜಿ.ಎಚ್. ನಾಯಕ ಅವರ ಪ್ರಬಂಧ ಸಂಕಲನ 'ಉತ್ತರಾರ್ಧ'ಕ್ಕೆ 2014ನೇ ಸಾಲಿನ ಪ್ರತಿಷ್ಠಿತ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. 2015ರ ಮಾರ್ಚ್ 9ರಂದು ನಡೆಯಲಿರುವ ಅಕಾಡೆಮಿ ವಾರ್ಷಿಕೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಉತ್ತರಕನ್ನಡ ಜಿಲ್ಲೆಯವರಾದ ಪ್ರೊ. ಗೋವಿಂದರಾಯ ಹಮ್ಮಣ್ಣ ನಾಯಕ ಅವರಿಗೆ ರಾಜ್ಯ ಸರಕಾರ ನೀಡುವ ಅತ್ಯುನ್ನತ ಸಾಹಿತ್ಯ ಪ್ರಶಸ್ತಿಯಾದ ಪಂಪ ಪ್ರಶಸ್ತಿಯೂ ಲಭಿಸಿದೆ. ಅವರ 'ನಿರಪೇಕ್ಷ ' ವಿಮರ್ಶಾ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ವಿಮರ್ಶಾ ಕೃತಿ 'ನಿಜದನಿ'ಗೆ ವಿ.ಎಂ. ಇನಾಂದಾರ ಸ್ಮಾರಕ ಬಹುಮಾನ ಅಲ್ಲದೇ ಪ್ರೊ. ನಾಯಕ ಅವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಜಿ.ಎಸ್. ಶಿವರುದ್ರಪ್ಪ ಸಾಹಿತ್ಯ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿಗಳೂ ಸಂದಿವೆ. ಅ

*ಅಭಿಮತ ವರದಿ*

## ಜನಕಪುರಿ ಕನ್ನಡ ಕೂಟದ ನೂತನ ಕಾರ್ಯಕಾರಿ ಸಮಿತಿ






ದೆಹಲಿಯ ಜನಕಪುರಿ ಕನ್ನಡ ಕೂಟದ ನೂತನ ಕಾರ್ಯಕಾರಿ ಸಮಿತಿಯನ್ನು ಜನಕಪುರಿಯ ಸಿ ಬ್ಲಾಕಿನಲ್ಲಿರುವ ಶ್ರೀ ರಾಮ ಮಂದಿರದಲ್ಲಿ ಇದೇ ಡಿಸೆಂಬರ್ 7ರಂದು ನಡೆದ ಕೂಟದ ಸರ್ವಸದಸ್ಯರ ಸಭೆಯಲ್ಲಿ ಆಯ್ಕೆ ಮಾಡಲಾಯಿತು.

ನೂತನ ಸಮಿತಿಯಲ್ಲಿ ಶ್ರೀ ಬಿ.ಕೆ ಬಸವರಾಜು (ಅಧ್ಯಕ್ಷ), ಶ್ರೀ ಸುಧಾಕರ ಕುರಂದವಾಡ (ಉಪಾಧ್ಯಕ್ಷ), ಶ್ರೀ ಗಂಗಾಧರ್ (ಕಾರ್ಯದರ್ಶಿ), ಶ್ರೀ ಎನ್.ಪಿ. ಚಂದ್ರಶೇಖರ್ (ಖಜಾಂಚಿ), ಶ್ರೀ ಬಸವರಾಜ ಹಿರೇಮಠ್ ಹಾಗೂ ಶ್ರೀ ಜಿ.ಎಂ. ಲಿಂಗರಾಜು (ಜಂಟಿಕಾರ್ಯದರ್ಶಿಗಳು), ಶ್ರೀ ಎಂ.ಕೆ. ರಮೇಶ್, ಶ್ರೀ ಎಂ.ಎಸ್. ಶಶಿಕುಮಾರ್ ಮತ್ತು ಶ್ರೀ ಮಹೇಶ್ ಕೋಳಿವಾಡ್ (ಸದಸ್ಯರು) ಇದ್ದಾರೆ.

ಜನಕಪುರಿ ಮಹಿಳಾ ಮಂಡಳಿಯ ಅಧ್ಯಕ್ಷೆ ಶ್ರೀಮತಿ ಮೀರ ನಾಡಿಗ ಮತ್ತು ಕಾರ್ಯದರ್ಶಿ ಶ್ರೀಮತಿ ಜಯಶ್ರೀ ಬಸವರಾಜ್ ಅವರು ಕೂಡಾ ಜನಕಪುರಿ ಕನ್ನಡ ಕೂಟದ ಕಾರ್ಯಕಾರಿ ಸಮಿತಿಯಲ್ಲಿದ್ದಾರೆ. ಶ್ರೀ ಕೆ.ಎಸ್.ಜಿ. ಶೆಟ್ಟಿ ಅವರು ಚುನಾವಣಾಧಿಕಾರಿಯಾಗಿದ್ದರು ಅ

*ಗಂಗಾಧರ್*

## ದೆಹಲಿ ಕನ್ನಡ ಶಾಲೆಯ ವಾರ್ಷಿಕೋತ್ಸವ

ದೆಹಲಿ ಕನ್ನಡ ಶಾಲೆಯ ವಾರ್ಷಿಕೋತ್ಸವವನ್ನು ದೇಶದ ವಿವಿಧ ಭಾಗಗಳ ಜಾನಪದ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರಗಳನ್ನು ನೀಡುವುದರೊಂದಿಗೆ ದೆಹಲಿಯ ಲೋಧಿ ಎಸ್ಟೇಟ್‌ನಲ್ಲಿರುವ ಶಾಲೆಯ ಆವರಣದಲ್ಲಿ ಡಿಸೆಂಬರ್ 23ರಂದು ಆಚರಿಸಲಾಯಿತು.

ದೆಹಲಿಯ ದೂರದರ್ಶನ ಕೇಂದ್ರದ ಅಡಿಷನಲ್ ಡೈರೆಕ್ಟರ್ ಜನರಲ್ ನಾಡೋಜ ಡಾ. ಮಹೇಶ್ ಜೋಷಿ ಮತ್ತು ಶಾಲೆಯ ಮಾಜಿ ಅಧ್ಯಕ್ಷ ಶ್ರೀ ಎನ್.ಜೆ. ಕಾಮತ್ ಅವರು ಮುಖ್ಯ ಅತಿಥಿಗಳಾಗಿದ್ದರು. ಶಾಲೆಯ ಆಡಳಿತ ಸಮಿತಿಯ ಅಧ್ಯಕ್ಷ ಶ್ರೀ ವಿ.ಆರ್. ಗುಡ್ಡೇಗೌಡ ಮತ್ತು ಪ್ರಾಂಶುಪಾಲ ಶ್ರೀ ಕೆ.ಟಿ.ಗಣೇಶ್ ಅವರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಅ

*ಅಭಿಮತ ವರದಿ*



# ಹೊಸವರ್ಷದ ಶುಭಾಶಯಗಳು


ಪೂರ್ವ ದಿಗಂತದಲ್ಲಿ ಬೆಳಕು ಬೀರುವ ಸೂರ್ಯ ಮಾತ್ರ ಅದೇ. ಆ ಬೆಳಕಿನಲ್ಲಿ ಹೊಸ ಚೈತನ್ಯವನ್ನು, ಹೊಸ ಕನಸುಗಳನ್ನು ಮತ್ತು ಹೊಸ ಆಶೋತ್ತರಗಳನ್ನು ಕಾಣುವ ಮನಸ್ಸುಗಳಿಗೆ ಅದೊಂದು ಹೊಸ ವರ್ಷದ ಹೊಸ ಹೊಂಗಿರಣ. ಜನವರಿಯ ಮೊದಲ ದಿನ ಮತ್ತೊಂದು ಹೊಸ ವರ್ಷದ ಹೊಸ ದಿನ. ಕಳೆದ ವರ್ಷದ ಹಳೆಯ ಸುಖದ ಮತ್ತು ನೋವಿನ ನೆನಪುಗಳನ್ನು ಮೆಲುಕು ಹಾಕುತ್ತಾ ಮುಂದಿನ ದಿನಗಳಲ್ಲಿ ಹೊಸತೊಂದು ಬದುಕನ್ನು ಕಟ್ಟಿಕೊಳ್ಳಲು ಹಲವು ನಿರ್ಣಯಗಳನ್ನು ಮಾಡುವ ದಿನ. ಬದುಕು ಹಸನಾಗಬೇಕು ಎಂದು ವೈಯಕ್ತಿಕವಾಗಿ, ಕೌಟುಂಬಿಕವಾಗಿ, ಸಾಮಾಜಿಕವಾಗಿ ಮತ್ತು ಒಂದು ರಾಷ್ಟ್ರದ ಪ್ರಜೆಯಾಗಿ ನಾವು ಹಲವು ನಿರ್ಣಯಗಳನ್ನು ಹೊಸವರ್ಷದ ಮೊದಲ ದಿನ ತೆಗೆದುಕೊಳ್ಳುತ್ತೇವೆ. ಅಂಥ ನಿರ್ಣಯಗಳು, ನಮಗೆ ನಾವೇ ಇಟ್ಟುಕೊಂಡ ಗುರಿಗಳು. ಕಳೆದ ವರ್ಷ ಎಷ್ಟು ಸಮರ್ಥವಾಗಿ ಮತ್ತು ಸುಲಲಿತವಾಗಿ ನಿಭಾಯಿಸಿದ್ದೇವೆ ಎಂಬ ಲೆಕ್ಕಾಚಾರವನ್ನು ಹಾಕಿರಬೇಕಲ್ಲ. ದೊಡ್ಡದೊಂದು ಬೆಟ್ಟವನ್ನು ಏರಲು ಸಣ್ಣ ಸಣ್ಣ ಹೆಜ್ಜೆಗಳನ್ನು ಇಟ್ಟೇ ಹೋಗಬೇಕು. ಅಂತಹ ಸಣ್ಣ ಹೆಜ್ಜೆಗಳ ದಾರಿಯುದ್ದಕ್ಕೂ ಇತಿಹಾಸದ ಪುಟಗಳಿಗೆ ಸೇರಿಸಿದ ದಿನಗಳಲ್ಲಿ ನಾವು ಅದೆಷ್ಟು ಕೆಟ್ಟ ಗಳಿಗೆಗಳನ್ನು ಮುಚ್ಚಿಟ್ಟಿದ್ದೇವೆ? ಮತ್ತೆಷ್ಟು ಸಿಹಿನೆನಪುಗಳನ್ನು ನಮ್ಮ ಅಂತಃಪಟಲದಲ್ಲಿ ಮುಂದೊಂದು ದಿನ ಮೆಲುಕು ಹಾಕಲು ಕಾಯ್ದಿರಿಸಿದ್ದೇವೆ!

ದೆಹಲಿ ಕರ್ನಾಟಕ ಸಂಘವೂ ಹಲವು ಯೋಜನೆಗಳನ್ನು, ಹಲವು ಭರವಸೆಯ ಚಿಂತನೆಗಳನ್ನು ಹೊತ್ತುಕೊಂಡು ಕನ್ನಡ ಮನಸ್ಸುಗಳು ಈ ದೇಶದ ರಾಜಧಾನಿಯಲ್ಲಿ ಕರ್ನಾಟಕದ ಕಂಪನ್ನು ಬಾನೆತ್ತರಕ್ಕೆ ಹರಡಲು ಸಾಧ್ಯವಾಗುವಂತಹ ಕನಸುಗಳನ್ನು ಕಟ್ಟಿಕೊಂಡು ನಿಂತಿದೆ. ನಡೆಯುವ ಹಾದಿಯಲ್ಲಿ ಹಲವು ಮೈಲಿಗಲ್ಲುಗಳನ್ನು ಸ್ಥಾಪಿಸಿಕೊಂಡಿದ್ದೇವೆ. ಆದರೆ ನಿರಂತರ ಪಯಣಿಗನಿಗೆ ನಡೆದ ಹಾದಿಗಿಂತಲೂ ಹೋಗಬೇಕಾದ ದೂರ ಅಧಿಕವಿರುತ್ತದೆ. ಆ ದೂರ ಪಯಣದಲ್ಲಿ ಇನ್ನೂ ಕೈಗೂಡದ ಕಲಸಗಳನ್ನು ಯೋಜಿತವಾಗಿ ಕೈಗೊಂಡು ಒಂದೊಂದು ಹೆಜ್ಜೆಯನ್ನೂ ಅವಿಸ್ಮರಣೀಯಗೊಳಿಸುವ ನಿರ್ಣಯವನ್ನು ಈ ಹೊಸವರ್ಷದ ಹೊಸದಿನಗಳಲ್ಲಿ ಮಾಡಬೇಕಾಗಿದೆ.

ಅಭಿಮತದ ಓದುಗರು, ಬರಹಗಾರರು, ಸಂಘದ ಸದಸ್ಯರು ಮುಂದಿನ ವಿಶೇಷ ಸಂಚಿಕೆಗೆ ಹೊಸ ಬರಹಗಳನ್ನು ಬರೆಯುವ ನಿರ್ಣಯವನ್ನು ಕೈಗೊಳ್ಳುವಿರಿ ಎಂದು ಆಶಿಸುತ್ತೇವೆ.

ಓದುಗರೆಲ್ಲರಿಗೂ ಹೊಸವರ್ಷದ ಹಾರ್ದಿಕ ಶುಭಾಶಯಗಳು!

***ಬಾಲಕೃಷ್ಣ ನಾಯ್ಕ್ ಡಿ.***



## ಕೆ. ರಾಮಯ್ಯನವರ ಚಿಂತನೆ

ತಮ್ಮ ಚಿಂತನೆಗಳಿಂದ ನಮ್ಮೆಲ್ಲರನ್ನು ಎಚ್ಚರಿಸಿದ ಕೆ. ರಾಮಯ್ಯನವರಿಗೆ ಅಭಿಮತದ ಕಳೆದ ಸಂಚಿಕೆಯಲ್ಲಿ ಪ್ರಾಮುಖ್ಯತೆಯನ್ನು ನೀಡಿದುದಕ್ಕೆ ಸಂಪಾದಕ ಮಂಡಳಿಗೆ ತುಂಬಾ ಧನ್ಯವಾದಗಳು. ಇದನ್ನು ಸಾಧ್ಯವಾಗಿಸಿದವರಿಗೆಲ್ಲರಿಗೂ ಅಭಿನಂದನೆಗಳು. ಅ

***ಡಾ. ಪುರುಷೋತ್ತಮ ಬಿಳಿಮಲೆ***

ನವದೆಹಲಿ

## ಅಭಿಮತ ಓದಿ ಸಭಾಂಗಣದಲ್ಲಿದ್ದ ಹಾಗೆ ಅನಿಸಿತು

ಡಿಸೆಂಬರ್ ತಿಂಗಳ ಅಭಿಮತ ಇ ಅಂಚೆಯಲ್ಲಿ ಬಂದು ತಲುಪಿದೆ. ಅಂದದ ಪುಟಕಟ್ಟು, ಓರಣದ ಅಕ್ಷರಗಳು, ಬರೆಹಗಳು ತುಂಬ ತುಂಬ ಚೆನ್ನಾಗಿವೆ. ಕೋಟಿಗಾನ ಹಳ್ಳಿ ರಾಮಯ್ಯನವರ ಮಾತು, ಪದ್ಯ ಮತ್ತು ಬಾನಾಡಿ ಸಂದರ್ಶನ ಪೂರ್ತಿ ಓದಿದೆ. ಅಲ್ಲೇ ಸಭಾಂಗಣದಲ್ಲಿದ್ದ ಹಾಗೆ ಅನಿಸಿತು. ಮತ್ತೊಮ್ಮೆ ದೆಹಲಿಗೆ ಕರೆತಂದುದಕ್ಕೆ ಧನ್ಯವಾದಗಳು. ಬಾನಾಡಿಗೂ ಇತರ ಸಂಪಾದಕ ಮಂಡಳಿಯ ಸದಸ್ಯರಿಗೂ ಅಭಿನಂದನೆ. ಅ

***ಗುರು ಬಾಳಿಗಾ***

ಮಂಗಳೂರು

## ದೆಹಲಿಯಲ್ಲಿಯೇ ಕರ್ನಾಟಕ

ದೆಹಲಿ ಕರ್ನಾಟಕ ಸಂಘವು ಇತ್ತೀಚೆಗೆ ಹಲವಾರು ತಿಂಗಳುಗಳಿಂದ ಕರ್ನಾಟಕದ ಸಂಸ್ಕೃತಿ, ಕಲೆ, ನುಡಿ, ಸಾಹಿತ್ಯಗಳ ಚರ್ಚೆ, ಸಂವಾದ ಮತ್ತು ಉತ್ಸವಗಳ ಸುರಿಮಳೆ




ಸುರಿಸಿ ರಾಷ್ಟ್ರದ ರಾಜಧಾನಿಯಲ್ಲಿ ಪಸರಿಸುವ ಕನ್ನಡಿಗರಿಗೆ ನಾಡಿನ ಕಂಪು, ಇಂಪು, ಪೆಂಪನ್ನು ಸವಿಯಲು ಅವಕಾಶ ಕಲ್ಪಿಸಿಕೊಟ್ಟು ದೆಹಲಿಯಲ್ಲಿಯೇ ಕರ್ನಾಟಕ ಎಂದು ಹೆಮ್ಮೆಯಿಂದ ಬೀಗುವಂತೆ ಮಾಡಿದೆ.

ಸಂಘದ ಪದಾಧಿಕಾರಿಗಳು, ಕಾರ್ಯಕರ್ತರು ಅನೇಕ ಸದಸ್ಯರು ಬಹಳಷ್ಟು ಪ್ರಯತ್ನಪಟ್ಟು ಸಂಘದ ಬೆಳವಣಿಗೆ, ಒಳಿತು ಮತ್ತು ಹಿರಿಮೆಗಾಗಿ ದಕ್ಷತೆಯಿಂದ ನಿಷ್ಠೆಯಿಂದ ಕೆಲಸ ಮಾಡಲು ಪ್ರಯತ್ನಿಸಿ ಸಾಕಷ್ಟು ಸಫಲತೆಯನ್ನು ಪಡೆದಿದ್ದಾರೆ. ಇಂತೆಯೇ ಕಾರ್ಯಾನ್ವಿತರಾದರೆ ರಾಷ್ಟ್ರದ ರಾಜಧಾನಿಯಲ್ಲಿ ಕರ್ನಾಟಕ ಸಂಘದ ಕೀರ್ತಿ ಪತಾಕೆ ದಿಗಂತದಲ್ಲಿ ಹಾರಾಡುವ ದೃಶ್ಯದ ಕನಸು ನನಸಾಗುವುದರಲ್ಲಿ ಸಂಶಯವಿಲ್ಲ.

ಈಗಿನ ಮತ್ತು ಮುಂದಿನ ಪೀಳಿಗೆ ಎಲ್ಲೋ ಅಡಗಿರುವ ರತ್ನ, ಸುವಾಸನೆಯ ಹೂವನ್ನು ಹುಡುಕಿ ತಮ್ಮ ತಮ್ಮ ತೋಟವನ್ನಲಂಕರಿಸಬೇಕು. ಹಿರಿಯರು ಮಾಡಿದ್ದೆಲ್ಲ ವಿವೇಕದಿಂದ ಎನ್ನುವಂತಿಲ್ಲ. ಕಿರಿಯರೆಲ್ಲ ಅನುಭವಿಗಳಲ್ಲ ಎನ್ನಬೇಕಾಗಿಲ್ಲ. ಸಮಯೋಚಿತವಾಗಿ, ಸಮಾನಭಾವದಿಂದ ಸಮಾಜದ ಹಿತಮಿತ ಎಲ್ಲವನ್ನೂ ಸಮನ್ವಯಗೊಳಿಸಿ ಕೆಲಸ ಮಾಡುವುದು ಮುಖ್ಯ ಧ್ಯೇಯವಾಗಬೇಕು. ಇದಕ್ಕೆ ನಾನು ಎಂಬ ಅಹಂ ತೊರೆದು ನಿಸ್ವಾರ್ಥತೆಯಿಂದ, ವಿನಯ, ವಿಧೇಯತೆ, ಸುಜ್ಞಾನ, ಮುಂಜಾಗರೂಕತೆಯಿಂದ ಎಲ್ಲರೊಡನೆ ಸಹಕರಿಸಿ ಕೆಲಸ ಮಾಡಿದರೆ ಇಂತಹ ಸಂಘ ಸಂಸ್ಥೆಗಳು ಮಜಬೂತಾಗಿ ಎತ್ತರೆತ್ತರಕ್ಕೆ ಬೆಳೆಯುತ್ತಾ ಕೀರ್ತಿಪ್ರಾಯವಾಗುತ್ತವೆ.

ಹಳಬರೂ, ಹೊಸಬರೂ, ಹಿರಿಯರೂ, ಕಿರಿಯರೂ, ಯುವಕ–ಯುವತಿಯರು ಎಂಬ ಪ್ರಬೇಧವನ್ನು, ಕಾಲ, ಜಾತಿ, ಕುಲ, ದೇಶ, ನಡೆ, ನುಡಿ ಎಂಬ ಬೇಧವಿಲ್ಲದೆ ಜ್ಞಾನದೀಪದ ಬೆಳಕಿನಲ್ಲಿ ಪ್ರಗತಿಪಥದೆಡೆ ನಡೆಯುತ್ತಾ ಯುವ ಪೀಳಿಗೆಯ ಧೀಮಂತ ಶಕ್ತಿಯನ್ನು ಸದುಪಯೋಗ ಪಡಿಸಿಕೊಂಡು ನಮ್ಮ ನಾಡು ನಮ್ಮ ದೇಶ ಎಂಬ ಹೆಮ್ಮೆಯ ಹಿರಿಮೆಯ ಭಾವನೆಯನ್ನು ಸಾಕಾರಗೊಳಿಸಬೇಕೆಂಬುದೇ ನನ್ನ ಅನಿಸಿಕೆ ಹಾರೈಕೆ. ಅ

***ಡಾ. ಅಹಲ್ಯಾ ಚಿಂತಾಮಣಿ***

ನವದೆಹಲಿ

**SAUJANYA** PRINTING PRESS
A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com
PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
January-2015, Vol. No.25, Issue No.4, Price Rs.1/- RNI Regn. No. 53405/91, DL-SW-1/4016/13-15
Printout Date : Jan. 8th / 9th, Postal Date :10th / 11th, Total Pages-24
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.


# * CURRENT & SAVINGS ACCOUNT CAMPAIGN *

November 15th 2014 to February 28th 2015

We also open SB Account under
**Pradhan Mantri Jan-Dhan Yojana (PMJDY)**

**FREE***

Debit Card | Internet Banking | Mobile Banking | SMS Alert | Missed Call Banking

# OPEN A R. D. ACCOUNT & SECURE YOUR FUTURE

**Be a Lakhpati**

| Monthly Installment ₹ | Period in Months | Your Total Investment ₹ |
|---|---|---|
| 1350 | 60 | 1,01,721 |
| 1100 | 72 | 1,04,216 |
| 900 | 84 | 1,04,299 |

**Be a millionaire**

| Monthly Installment ₹ | Period in Months | Your Total Investment ₹ |
|---|---|---|
| 7200 | 96 | 10,00,405 |
| 6150 | 108 | 10,09,138 |
| 5250 | 120 | 10,05,391 |

*Conditions Apply

**Please contact us for details of other options**

Call Toll Free No. 1800 425 1444 or Step into your nearest branch for details

Karnataka Bank Ltd.
Your Family Bank. Across India.

Regd. & Head Office : Mangaluru - 575 002 CIN: L85110KA1924PLC001128 E-mail: info@ktkbank.com Visit us at: www.karnatakabank.com